# ಜಾಗತೀಕರಣಗೊಳ್ಳುತ್ತಿರುವ ಜಗತ್ತಿನಲ್ಲಿ ಬಾಲ್ಯ

**ಕೃಷ್ಣ ಕುಮಾರ್**

ಆಧುನಿಕ ಜಗತ್ತಿನ ಕಲ್ಯಾಣ ರಾಜ್ಯದ ಉದಯದ ಹೊತ್ತಿನಲ್ಲೇ ಸರಿಸುಮಾರಾಗಿ ಬಾಲ್ಯವನ್ನು ಬದುಕಿನ ಒಂದು ಸಂರಕ್ಷಿತ ಹಾಗೂ ವಿಶೇಷ ಹಕ್ಕಿನ ಅವಧಿಯನ್ನಾಗಿ ಸ್ವೀಕರಿಸಲಾಯಿತು, ಮತ್ತು ಅದು ಜಾಗತೀಕರಣದ ಸಂವಾದ ಶುರುವಾದ ಎಷ್ಟೋ ವರ್ಷಗಳ ಮುಂಚೆಯೇ ಆಗಿತ್ತು. ಆದರೆ ಅಂತರ್ಜಾಲ ಮತ್ತು ಪ್ರವಾಸೋದ್ಯಮದಂತಹ ಜಾಗತೀಕರಣದ ಸರ್ವವ್ಯಾಪಿ ಸಾಧನಗಳು ಈಗಿನ ಕಲ್ಯಾಣ ರಾಜ್ಯವನ್ನು ದುರ್ಬಲಗೊಳಿಸಿವೆ ಹಾಗೂ ಮಗು ಮತ್ತು ಹೊರಗಿನ ಜಗತ್ತಿನ ನಡುವೆ ಮಧ್ಯವರ್ತಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಶಿಕ್ಷಕ ಮತ್ತು ಕಲಿಕಾ ವ್ಯವಸ್ಥೆಯಲ್ಲಿ ಈ ಮೊದಲು ಅಸ್ತಿತ್ವದಲ್ಲಿದ್ದ “ಸುರಕ್ಷಾ” ಗೋಡೆಗಳನ್ನು ಮುರಿದಿವೆ. ಜಾಗತೀಕರಣದ ಪರಿಣಾಮವು ಇನ್ನೂ ಎಷ್ಟು ಆಳದವರೆಗೆ ಹರಡಿದೆ ಎನ್ನುವುದರ, ಅಂದರೆ ಕೆಲಸದ ವೈಖರಿ, ಮಗುವನ್ನು ಸಾಕುವ ಪದ್ಧತಿಗಳು, ಮತ್ತು ಕುಟುಂಬ ಎನ್ನುವುದರ ಪರಿಕಲ್ಪನೆಯಲ್ಲಿ ಆದ ಬದಲಾವಣೆಗಳು ಹಾಗೂ, ಅದಕ್ಕೆ ಪ್ರತಿಯಾಗಿ ಅಂತಹ ಬದಲಾವಣೆಗಳು ಬಾಲ್ಯದ ಮೇಲೆ ಯಾವ ರೀತಿ ಪರಿಣಾಮ ಬೀರುತ್ತಿವೆ ಎನ್ನುವುದರ ಒಂದು ವ್ಯವಸ್ಥಿತ ಅಧ್ಯಯನವು ಇನ್ನೂ ನಡೆಯಬೇಕಿದೆ.

“ಜಾಗತೀಕರಣ”ದ ಪರಿಭಾಷೆಯು ನಮ್ಮನ್ನು ತೊಡಗಿಸಿಕೊಳ್ಳಲು ಒದಗಿಸುವ ವಿಷಯಗಳು ನಮಗೆ ಹೊಸತೇನಲ್ಲ. ಕೆಲವು ವಿಷಯಗಳಂತೂ ನಮಗೆ ಪರಿಚಿತವೇ ಆಗಿವೆ ಮತ್ತು ಬೇರೆ ಬೇರೆ ಸಮಾಜ ವಿಜ್ಞಾನಗಳಲ್ಲಿ ಯಥೇಚ್ಚ ಗಮನವನ್ನು ಸೆಳೆದಿವೆ. ಉದಾಹರಣೆಗೆ ಕಾಲಘಟ್ಟದಲ್ಲಿ ಭೌಗೋಳಿಕವಾಗಿ ದೂರದಲ್ಲಿದ್ದ ಸಮಾಜಗಳು ಮತ್ತು ಸಂಸ್ಕೃತಿಗಳ ನಡುವಿನ ಸಂಪರ್ಕವು ಚರಿತ್ರೆಯಲ್ಲಿ ಒಂದು ಪ್ರಮುಖವಾದ ಅಧ್ಯಯನ ವಿಷಯವಾಗಿದೆ. ದಾಳಿಗಳು ಮತ್ತು ದಾಸ್ಯಕ್ಕೆ ಗುರಿಪಡಿಸುವುದು, ವಸಾಹತೀಕರಣ ಮತ್ತು ಸಂಪನ್ಮೂಲಗಳ ಹರಣಗಳು ಅರ್ಥಶಾಸ್ತ್ರ ಮತ್ತು ರಾಜಕೀಯ ಅರ್ಥಶಾಸ್ತ್ರ, ಸಾಮಾಜಿಕ-ಮಾನವಶಾಸ್ತ್ರ ಮತ್ತು ತುಲನಾತ್ಮಕ ಅಧ್ಯಯನ ಮುಂತಾದ ವಿವಿಧ ಜ್ಞಾನವಿಭಾಗಗಳ ವ್ಯಾಪ್ತಿಯಲ್ಲಿ ಸಂಶೋಧನೆ ಮತ್ತು ಸಿದ್ಧಾಂತೀಕರಣದ ವಿಷಯಗಳಾಗಿವೆ. ಈ ವಿದ್ಯಮಾನವನ್ನು ಈಗ ”ಜಾಗತೀಕರಣ”ವೆಂದು ಯಾವುದನ್ನು ಕರೆಯಲಾಗುತ್ತದೆಯೋ ಆ ಪ್ರಕ್ರಿಯೆಯಿಂದ ದೂರವಿಟ್ಟು ನೋಡುವುದು ಕಷ್ಟವಾಗುತ್ತದೆ. ನೈಸರ್ಗಿಕ ಸಂಪನ್ಮೂಲಗಳನ್ನು ಬಂಡವಾಳಶಾಹಿ ಗುರಿಗಳಿಗೆಂದು ಸೂರೆಮಾಡುವ ವಿಶ್ವವ್ಯಾಪಿ ಪ್ರವೃತ್ತಿಯನ್ನು ಕುರಿತು ಬಹಳ ಹಿಂದಿನಿಂದಲೂ ವಿದ್ವಾಂಸರು ನಿರಂತರವಾಗಿ ಉಲ್ಲೇಖಿಸುತ್ತಿರುವುದನ್ನು ನೋಡಿದರೆ [ಉದಾ: ಬರನ್ 1957; ಗ್ಯಾಲಿಯಾನೊ, 1998] ಈಗ ಜಾಗತೀಕರಣವನ್ನು ಕುರಿತು ಚರ್ಚಿಸುವಾಗ ನಮಗೆ ಪ್ರಸ್ತುತದಲ್ಲಿ ಕಂಡುಬರುವ ಪ್ರಕ್ರಿಯೆಗಳು ಆರಂಭದಶೆಯ ಪ್ರಕ್ರಿಯೆಗಳು ಎನ್ನಲು ಸಾಧ್ಯವಿಲ್ಲ. ಜಾಗತೀಕರಣವೆಂಬ ಸಂಗತಿಯ ಆರ್ಥಿಕ ಮತ್ತು ರಾಜಕೀಯ, ಹಾಗೂ ತಾಂತ್ರಿಕ ಮತ್ತು ಸಾಂಸ್ಕೃತಿಕ ಲಕ್ಷಣಗಳು ಯಾವವೂ ಹೊಸತಲ್ಲ. ಆದರೂ ಆ ಪರಿಭಾಷೆಯು ಉಳಿದುಕೊಂಡೇ ಬಂದಿದೆ, ಮತ್ತು ಕೆಲವರಿಗೆ ಅದು ಮೆಚ್ಚಿನ ಪರಿಭಾಷೆಯೂ ಆಗಿದೆ. ಅದು ಆಗಲೇಬೇಕು, ಏಕೆಂದರೆ ಅದು ಜಗತ್ತಿನ ಸಮಕಾಲೀನ ಚರಿತ್ರೆಯ ಮೈಲಿಗಲ್ಲೊಂದನ್ನು ನೆನಪಿಸುತ್ತದೆ, ಅಂದರೆ 1989ರಲ್ಲಿ ಯುಎಸ್ಎಸ್ಆರ್ ಮುರಿದು ಬಿದ್ದ ಆ ಒಂದು ಕಾಲಘಟ್ಟದಲ್ಲಿ ನಡೆದ ಪಲ್ಲಟವನ್ನು ನೆನಪಿಸುತ್ತದೆ. ಈ ಘಟನೆಯು ಜಗತ್ತಿನ ಅರ್ಥ ವ್ಯವಸ್ಥೆಯ ಮೇಲೆ, ಸೇನಾ ವ್ಯವಸ್ಥೆಯ ಮೇಲೆ, ಅಷ್ಟೇ ಅಲ್ಲ, ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿಯೂ ಮಾಡಿದ ಪರಿಣಾಮಗಳು ಬಹಳ ದೂರದವರೆಗೆ ವ್ಯಾಪಿಸಿವೆ ಮತ್ತು ಇನ್ನೂ ಹಲವು ಆಯಾಮಗಳಲ್ಲಿ ಹೊರಬರುತ್ತಲೇ ಇವೆ. ಅದೇ ರೀತಿ 1990ರ ಮಧ್ಯಭಾಗದಲ್ಲಿ ಅಂತರ್ಜಾಲವು ನಾಗರಿಕರ ಬಳಕೆಗೆಂದು (ಸೈನ್ಯದಿಂದ ಕೆಲ ಸಮಯದವರೆಗೆ ಅಸ್ತಿತ್ವದಲ್ಲಿದ್ದ ರೀತಿಯ ಅಂತರ್ಜಾಲವು ಯಾವ ತಂತ್ರಜ್ಞಾನದ ಬಳಕೆಯನ್ನು ಆಧರಿಸಿದೆಯೋ ಅದಕ್ಕೆ ವಿರುದ್ಧವಾಗಿ) ತೆರೆಯಲ್ಪಟ್ಟಿತು ಮತ್ತು ವಿಸ್ತೃತಗೊಳ್ಳತೊಡಗಿತು. ಜೊತೆಗೆ, ಸಾಮಾಜಿಕ ಚರಿತ್ರೆಯನ್ನು

ಒಂದು ಶತಮಾನಕ್ಕಿಂತ ಹೆಚ್ಚು ಕಾಲ ಆಧುನಿಕ ದೂರ-ಸಂವಹನ ತಂತ್ರಜ್ಞಾನವು ರೂಪಿಸಿದೆ. ಆದ್ದರಿಂದ ಅಂತರ್ಜಾಲವು ಅದು ದೂರ-ಸಂವಹನ ತಂತ್ರಜ್ಞಾನದ ವೇಗ, ಅದರ ಕ್ವಾಂಟಮ್ ಮತ್ತು ಸ್ವರೂಪವನ್ನು ಆಮೂಲಾಗ್ರವಾಗಿ ವೃದ್ಧಿಸಿದೆ ಎನ್ನುವುದಂತೂ ನಿಜ, ಆದರೆ ಅದನ್ನು ಚರಿತ್ರೆಯ ಮೈಲಿಗಲ್ಲು ಎನ್ನಲಾಗದು. ಅದರ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಣಾಮಗಳು ಸಂಕೀರ್ಣವಾಗಿವೆ ಮತ್ತು ಖಂಡಿತಕ್ಕೂ ಉತ್ಪಾದಕವಾಗಿದೆ.

ಒಂದೆಡೆ, ಯುಎಸ್ಎಸ್ಆರ್ ಮತ್ತು ಈಸ್ಟ್ ಬ್ಲಾಕ್‌ನ ಪತನವಾಯಿತು ಮತ್ತು ಇನ್ನೊಂದೆಡೆ ನಾಗರಿಕ ಸೇವೆಗೆಂದು ಅಂತರ್ಜಾಲವು ಲಭ್ಯವಾಯಿತು, ಇವೆರಡೂ ಸೇರಿ ಪ್ರಭುತ್ವ ಮತ್ತು ಮಾರುಕಟ್ಟೆಯ ಸಾಂಸ್ಥಿಕ ಸಂರಚನೆಗಳ ನಡುವಿನ ಸಂಬಂಧಗಳು ಜಗತ್ತಿನಾದ್ಯಂತ ಬದಲಾಗುವ ರೀತಿಯಲ್ಲಿ ಸಂದರ್ಭವೊಂದನ್ನು ಒದಗಿಸಿವೆ. ಈ ಬದಲಾವಣೆಗೆ ಅದಾಗಲೇ ಬೇರೂರಿದ್ದ ಅಥವಾ ಚಾರಿತ್ರಿಕವಾಗಿ ರೂಪುಗೊಂಡ ಅಧಿಕಾರದ ಸಂಬಂಧಗಳು ಮಧ್ಯಸ್ಥಿಕೆ ವಹಿಸಿದವು. ಇದರಿಂದಾಗಿ, ಹಿಂದುಳಿದ ಎಂದು ಕರೆಯಲಾಗುವ ದೇಶಗಳು ತಮ್ಮ ರಾಷ್ಟ್ರೀಯ ಅರ್ಥವ್ಯವಸ್ಥೆಗಳನ್ನು ಜಾಗತಿಕ ಮಾರುಕಟ್ಟೆಯ ಬೇಡಿಕೆಗಳಿಗೆ ತಕ್ಕಂತೆ ರಾಚನಿಕವಾಗಿ ಹೊಂದಿಸಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಯಿತು. ಈ ಮಾರುಕಟ್ಟೆಗಳನ್ನು “ಜಾಗತಿಕ” ಎಂದು ವರ್ಣಿಸಲಾಗುವುದಾದರೂ ಅವು ಪ್ರಧಾನವಾಗಿ ನೆಲೆಯೂರಿರುವುದು ಪೂರ್ಣವಾಗಿ ಅಭಿವೃದ್ಧಿ ಹೊಂದಿದ ಜಗತ್ತಿನ, ಅತಿರೇಕದ ಸರಕು ಸಂಸ್ಕೃತಿಯ (hyper-consumer societies) ಸಮಾಜಗಳಲ್ಲಿ. ವಿಚಲಿತಗೊಂಡ ಅಥವಾ ಬಿಕ್ಕಟ್ಟಿನ ಒಂದು ಪರಿಸರದಲ್ಲಿ ವಿಶ್ವ ವಾಣಿಜ್ಯ ಸಂಸ್ಥೆಯಂತಹ ಹೊಸ ಸಾಂಸ್ಥಿಕ ವ್ಯವಸ್ಥೆಗಳನ್ನು ಕುರಿತು ಪರಿಹಾರದ ಮಾತುಕತೆಗಳು ನಡೆಯುತ್ತಿವೆ, ಅದು 1980ರ ಆದಿ ಭಾಗದಿಂದ ಆರಂಭಗೊಂಡ ಜಾಗತೀಕರಣವನ್ನು ಕುರಿತ ಚರ್ಚೆಗಳ ಒಂದು ಸ್ವರೂಪವೇ ಆಗಿದೆ. ಜಾಗತೀಕರಣವನ್ನು ಕುರಿತ ಚರ್ಚೆಗಳು ನಡೆಯುತ್ತಿರುವಂತಹ ಆ ಬಿಕ್ಕಟ್ಟಿನ ಪರಿಸರಕ್ಕೆ ಅಮೇರಿಕ ಮತ್ತು ಯುನೈಟೆಡ್ ಕಿಂಗ್‌ಡಮ್‌ನ ನಾಯಕತ್ವದಲ್ಲಿ ಮಿತ್ರ ರಾಷ್ಟ್ರಗಳ ಬಲದೊಂದಿಗೆ ಇರಾಕ್ ಮೇಲೆ ನಡೆದ ದಾಳಿ, ಹಾಗೂ ಇರಾನ್‌ಗೆ ಒಡ್ಡಿದ ಬೆದರಿಕೆಗಳು ಗಮನಾರ್ಹ ಕೊಡುಗೆಯನ್ನೇ ನೀಡಿವೆ. ಈ ಚರ್ಚೆಗಳೇನೂ ಒಂದು ಸಾಮಾನ್ಯ ಅಕೆಡೆಮಿಕ್ ಚರ್ಚೆಗಳಲ್ಲಿ ನಿರೀಕ್ಷಿಸುವ ಹಾಗೆ ನಿರ್ಲಿಪ್ತವಾಗಿ, ಅಥವಾ ಯಾರನ್ನೂ ಪಣಕ್ಕೊಡ್ಡದೇ ಅಂತೂ ನಡೆಯುತ್ತಿಲ್ಲ. ಜಾಗತೀಕರಣಕ್ಕೆ ಇರಾಕ್ ಮೇಲಾದ ದಾಳಿಯ ಪಾತ್ರವನ್ನು ಅಲ್ಲಗಳೆಯುವುದು ಕೂಡಾ ಕಷ್ಟವೇ. ಇರಾಕ್ ಮೇಲಿನ ದಾಳಿಯು ಅಮೇರಿಕಾವು ವಿಯೆಟ್ನಾಂ ಮೇಲೆ ನಡೆಸಿದ ದಾಳಿಯಂತಲ್ಲ. ಇರಾಕ್ ಯುದ್ಧವು ಅನೇಕ ರಾಷ್ಟ್ರಗಳ ಬೆಂಬಲದೊಂದಿಗೆ ನಡೆಯಿತು. ಅದರ ಪರಿಣಾಮಗಳು ಇಂದು ಅದರಲ್ಲಿ ನೇರವಾಗಿ ತೊಡಗಿಸಿಕೊಂಡ ದೇಶಗಳನ್ನೂ ಒಳಗೊಂಡು ಅನೇಕ ದೇಶಗಳ ರಾಜಕೀಯ ಮತ್ತು ಅರ್ಥವ್ಯವಸ್ಥೆಯನ್ನು ರೂಪುಗೊಳಿಸುತ್ತಿವೆ. ಈ ಅರ್ಥದಲ್ಲಿ, ಜಾಗತೀಕರಣವು ಯುದ್ಧದ ಭೂಗೋಳವನ್ನು ಬೇರೆ ರೀತಿಯಲ್ಲಿ ಗ್ರಹಿಸುವಂತೆ ಮಾಡುತ್ತಿದೆ. ನಮಗೆ ಈಗ ಇಡೀ ಜಗತ್ತನ್ನು ಪ್ರಭಾವಿಸುವ ಮತ್ತೊಂದು ವಿಶ್ವವ್ಯಾಪಿ ಯುದ್ಧದ ಅಗತ್ಯವಿಲ್ಲ.

### ಮಕ್ಕಳು ಮತ್ತು ಬಾಲ್ಯ

ಜಾಗತೀಕರಣ ಮತ್ತು ಬಾಲ್ಯದ ನಡುವಿನ ಸಂಬಂಧವನ್ನು ಕುರಿತ ಜಿಜ್ಞಾಸೆಯನ್ನು ಆರಂಭಿಸಲು ಈ ಚಿಕ್ಕ ಹಿನ್ನೆಲೆಯು ಉಪಯುಕ್ತವಾದೀತು, ಅಷ್ಟರಮಟ್ಟಿಗೆ, ಈ ಹಿನ್ನೆಲೆಯು ಈ ಸಂಬಂಧದ ಅಥವಾ ಜಾಗತೀಕರಣದ ಸಾಮಾಜಿಕ ಮತ್ತು ಸಾಂಸ್ಕೃತಿಕ ಆಯಾಮಗಳನ್ನು ಕುರಿತು ಮಾಡುವ ಯಾವುದೇ ಜಿಜ್ಞಾಸೆಗೂ ಕೂಡಾ ಎಷ್ಟು ತುರ್ತಿನದು ಎನ್ನುವುದನ್ನು ಸೂಚಿಸುತ್ತದೆ. ನಮ್ಮ ಜಿಜ್ಞಾಸೆಯಲ್ಲಿನ ಕೆಲವು ಅಂಶಗಳು ನಿಜಕ್ಕೂ ಪ್ರಸ್ತುತವೇ ಅಥವಾ ಅವು ಜಾಗತೀಕರಣಕ್ಕೆ ನೇರವಾಗಿ ಸಂಬಂಧಿಸಿವೆಯೇ ಎಂಬ

ಸಂದೇಹವುಂಟಾಗುವ ಸಾಧ್ಯತೆ ಹೆಚ್ಚಾಗಿದೆ. ಇನ್ನೂ ಪಕ್ವಗೊಳ್ಳದ, ಅಥವಾ ಪೂರ್ಣಗೊಳ್ಳದ ಒಂದು ಪ್ರಕ್ರಿಯೆಗೆ ಅದರ ಪರಿಣಾಮಗಳನ್ನು ಕುರಿತ ಜಿಜ್ಞಾಸೆಯ ಮಾನದಂಡಗಳನ್ನು ಸ್ಪಷ್ಟವಾಗಿ ಎಳೆಯಲಾಗದು. ಅದೇ ರೀತಿ, ಆ ಪ್ರಕ್ರಿಯೆಯು ಆತಂಕದ ಒಂದು ಆಯಾಮವನ್ನೂ ಹೊಂದಿರುವಾಗ, ಅಂದರೆ ಇಲ್ಲಿ ಮರಳಿ ಮುಂಚಿನ ಸ್ಥಿತಿಗೆ ಹೋಗಲಾಗದ ಒಂದು ಆತಂಕವನ್ನು ಜಾಗತೀಕರಣವು ಸೃಷ್ಟಿಸಿದೆ ಎನ್ನುವುದಾದರೆ (ಅದನ್ನು ಜಾಗತೀಕರಣದ ವಿಚಾರವಾದಿಗಳು ತಪ್ಪದೇ ಒತ್ತಿ ಹೇಳುತ್ತಾರೆ), ಆಗ ಅಲ್ಲಿ ಸಮಾಜವಿಜ್ಞಾನದ ಚರ್ಚೆಗಳಲ್ಲಿ ನಿರೀಕ್ಷಿಸುವ ನಿರ್ಭಾವುಕ ವಸ್ತುನಿಷ್ಠತೆಯನ್ನು ಕಾಣುವುದು ಕಷ್ಟ, ಅದರಲ್ಲೂ ಬಾಲ್ಯದಂತಹ ಅತಿ ನಾಜೂಕಿನ ಒಂದು ವಿಷಯವಿದ್ದಾಗ. ಮಕ್ಕಳು ವಯಸ್ಕ ಸಂಬಂಧಗಳು ಮತ್ತು ಸಮುದಾಯದ ಗುಣವಿಶೇಷಗಳನ್ನು ಪ್ರಭಾವಿಸುವುದು ಹೌದಾದರೂ, ಯಾವುದೇ ಸಾಮಾಜಿಕ ಕ್ರಿಯೆಗಳಲ್ಲಿ (sociodrama) ಅವರು ಒಂದು ಸಕ್ರಿಯ ಅಥವಾ ಸ್ವತಂತ್ರ ಎನ್ನಬಹುದಾದ ಪಾತ್ರವನ್ನು ನಿರ್ವಹಿಸುತ್ತಿರುತ್ತಾರೆ ಎನ್ನಲಾಗುವುದಿಲ್ಲ.

ಮಾನವ ಚರಿತ್ರೆಯ ಯಾವುದೇ ಘಟ್ಟದಲ್ಲಿಯೂ ಮಕ್ಕಳನ್ನು ಕುರಿತು ಆತಂಕಿತರಾಗದೇ ಅವರನ್ನು ಬೆಳೆಸಿರುವುದು ಸಾಧ್ಯವಿಲ್ಲ. ಕೊನೇ ಪಕ್ಷ ಶೈಶವದಲ್ಲಿಯಾದರೂ ಆತಂಕವಿದ್ದೇ ಇರುತ್ತದೆ. ಮಕ್ಕಳನ್ನು ಕುರಿತ ವಯಸ್ಕರ ಅನುಕ್ರಿಯೆಗೆ ಸಂಬಂಧಿಸಿದ ಆತಂಕದ ನಿಟ್ಟಿನ ಯಾವುದೇ ಸಾಮಾಜಿಕ ಅಧ್ಯಯನದಲ್ಲಿಯೂ ಲಿಂಗ ಪ್ರಜ್ಞೆಯ ದೃಷ್ಟಿಕೋನವು (gender-conscious view) ಅಗತ್ಯವೆಂದು ಇಲ್ಲಿ ಯಾರಾದರೂ ವಾದಿಸಬಹುದು. ಆ ದೃಷ್ಟಿಯಲ್ಲಿ ಈಗ ಜಾಗತೀಕರಣವನ್ನು ಲಿಂಗ ದೃಷ್ಟಿಕೋನದಿಂದ ಅಧ್ಯಯನ ಮಾಡಿದ ಸಾಹಿತ್ಯವು ಬಹಳಷ್ಟಿದೆ ಮತ್ತು ಇದು ಎಲ್ಲಕ್ಕಿಂತ ಹೆಚ್ಚಾಗಿ, ನಮ್ಮ ಕಾಲದ ಸಾಮಾಜಿಕ ಅಧ್ಯಯನದಲ್ಲಿ ಒಂದು ವೈಧಾನಿಕ ಅಂಶವಾಗಿ ದೃಷ್ಟಿಕೋನಕ್ಕೆ ಇರುವ ಮಹತ್ವವನ್ನು ಕುರಿತು ಗಮನ ಸೆಳೆಯುತ್ತದೆ. ಆದ್ದರಿಂದ, ಜಾಗತೀಕರಣದ ಚರ್ಚೆಯನ್ನು ದೃಷ್ಟಿಕೋನಗಳು ಮತ್ತು ಭಾವುಕತೆ-ಈ ಎರಡನ್ನೂ ನಿಷೇಧಿಸುವ ಸಮಾಜ ವಿಜ್ಞಾನಗಳ ಆ ಹಳೆಯ ಮಾದರಿಯಲ್ಲಿಯೇ ಮುಂದುವರಿಸುವವರು, ಅವರು ತುಲನಾತ್ಮಕವಾಗಿ ಹೆಚ್ಚು ನಿಖರವೆನಿಸಿದ ಅರ್ಥಶಾಸ್ತ್ರದ ಸಮಾಜ ವಿಜ್ಞಾನದಲ್ಲಿ ಪಾಂಡಿತ್ಯವನ್ನು ಹೊಂದಿದ್ದರೂ, ಬಾಲ್ಯದಂತಹ ವಿಷಯದ ಮೇಲೆ ಯಾವುದೇ ಗಮನಾರ್ಹ ಒಳನೋಟಗಳನ್ನು ಕೊಡಲಾರರು ಎಂದು ವಾದಿಸಲು ಸಾಧ್ಯ. ಹೆಚ್ಚೆಂದರೆ, ಅಂತರರಾಷ್ಟ್ರೀಯ ಮತ್ತು ಉಪ-ರಾಷ್ಟ್ರೀಯ ಆರ್ಥಿಕ ಸಂಬಂಧಗಳಲ್ಲಿ ಉಂಟಾದ ಬದಲಾವಣೆಗಳು, ಅದರಲ್ಲೂ ವಿಶೇಷವಾಗಿ ದುಡಿಮೆ ಮತ್ತು ವೇತನ, ನೈಸರ್ಗಿಕ ಸಂಪನ್ಮೂಲಗಳ ಲಭ್ಯತೆ ಮತ್ತು ಮಾನವ ಸಂಬಂಧಗಳಲ್ಲಿನ ಸಂದರ್ಭದಲ್ಲಿ ಕಂಡುಬರುವ ಬದಲಾವಣೆಗಳು ಮಕ್ಕಳನ್ನು ಹೇಗೆ ಪ್ರಭಾವಿಸುತ್ತಿವೆ ಎಂಬುದನ್ನಾದರೂ ಅವರು ನಮಗೆ ಹೇಳಬಹುದು (ಅದನ್ನವರು ತಿಳಿಸಲು ಇಚ್ಛಿಸಿದಲ್ಲಿ. ಹೆಚ್ಚಿನ ಸಮಕಾಲೀನ ಅರ್ಥಶಾಸ್ತ್ರಜ್ಞರು ಹೀಗೆ ಮಾಡುವುದಿಲ್ಲ). ಈ ರೀತಿಯ ಮಾಹಿತಿಯು ಒಂದು ಬಗೆಯ ಭಾವೋದ್ರೇಕವನ್ನು ಸೃಷ್ಟಿಸಬಹುದೇ ವಿನಃ ಮತ್ತೇನೂ ಮಾಡಲಾರದು. ಏಕೆಂದರೆ, ಯಾವುದೇ ದುರ್ಬಲ ಸಮುದಾಯವೊಂದರ ಶೋಷಣೆ ಅಥವಾ ಹಿಂಸೆಯನ್ನು ಕುರಿತ ಸುದ್ದಿಗಳಿಗೆ ಹೇಗೆ ಪ್ರತಿಕ್ರಿಯಿಸುತ್ತೇವೆಯೋ ಅದಕ್ಕಿಂತ ಭಿನ್ನವಾಗಿ ಆ ಮಾಹಿತಿಗಳನ್ನು ಮೈಗೂಡಿಸಿಕೊಳ್ಳುವ/ಅರಗಿಸಿಕೊಳ್ಳುವ ಬಗೆ ನಮಗೆ ಗೊತ್ತಿಲ್ಲ. ಎರಡು ರಾಷ್ಟ್ರಗಳ ನಡುವೆ ಅಥವಾ ಎರಡು ಬುಡಕಟ್ಟು ಸಮುದಾಯಗಳ ನಡುವೆ ಯುದ್ಧ ನಡೆಯುತ್ತಿರುವ ಸಂದರ್ಭದಲ್ಲಿ ಅಲ್ಲಿಯ ಮಕ್ಕಳಿಗಾದ ಅನುಭವ, ಅಥವಾ ನೈಸರ್ಗಿಕ ವಾಸಸ್ಥಳಗಳನ್ನು ಕಾರ್ಪೊರೇಟ್ ದೊರೆಗಳು ಆಕ್ರಮಿಸಿಕೊಂಡು ಹೊಸ ಕಟ್ಟಡಗಳನ್ನು ನಿರ್ಮಿಸಿ ಅಲ್ಲಿನ ಮಕ್ಕಳು ನೆಲೆ ಕಳೆದುಕೊಂಡ ಅನುಭವವನ್ನು ಕುರಿತ ಮಾಹಿತಿಗಳನ್ನು ಅರಿವಿನೊಂದಿಗೆ ಅರ್ಥಮಾಡಿಕೊಳ್ಳಲು ಜಾಗತೀಕರಣದ ಚರ್ಚೆಗಳಲ್ಲಿ ಪ್ರಸ್ತಾಪಿಸುವುದೇ ಅಪರೂಪವಾದ ಪರಿಕಲ್ಪನೆಯೊಂದರ ಸಹಾಯದೊಂದಿಗೆ ಆ ಮಾಹಿತಿಯನ್ನು ಪರೀಕ್ಷಿಸಿ ನೋಡಬೇಕು. ಅದು

“ಬಾಲ್ಯ”ವೆಂಬ ಪರಿಕಲ್ಪನೆ. ಈ ಕಸರತ್ತು, ಮುಖ್ಯವಾಗಿ ಶಿಕ್ಷಣದ ಮೇಲಿನ ಜಾಗತೀಕರಣದ ಪರಿಣಾಮಗಳನ್ನು ಪರೀಕ್ಷಿಸಲು ಪ್ರಯೋಜನಕ್ಕೆ ಬರುತ್ತದೆ, ಅದು ಬಾಲ್ಯಕ್ಕೆ ಸಂಬಂಧಿಸಿದಂತೆ ಅತಿದೊಡ್ಡ ಆಧುನಿಕ ಚಿಂತನೆಯಾಗಬಲ್ಲದು ಎನ್ನುವುದರಲ್ಲಿ ಸಂಶಯವೇ ಇಲ್ಲ.

**ಆಧುನಿಕ ಚರಿತ್ರೆಯಲ್ಲಿ ಬಾಲ್ಯ**

ಬಹುತೇಕ ಮಾನವ ಚರಿತ್ರೆಯಲ್ಲಿ ಮಕ್ಕಳನ್ನು ಹೆಚ್ಚಿನ ಪಾಲು ವಿಶೇಷ ಅಗತ್ಯಗಳು ಅಥವಾ ಗುಣಲಕ್ಷಣಗಳಿಲ್ಲದ, ವಯಸ್ಕರದ್ದೇ ಸಣ್ಣ ಆವೃತ್ತಿಗಳು ಎಂಬಂತೆ ನೋಡಲಾಗಿದೆ ಮತ್ತು ಜಗತ್ತಿನ ಹೆಚ್ಚಿನ ಭಾಗಗಳಲ್ಲಿ ಇವತ್ತಿಗೂ ಹಾಗೆಯೇ ನೋಡಲಾಗುತ್ತದೆ. ನಾವು ಇಂದು ಮಕ್ಕಳನ್ನು ಕುರಿತು ಹೇಗೆ ಯೋಚಿಸುತ್ತೇವೆಯೋ ಅದಕ್ಕೂ, ಯುರೋಪಿನ ಜ್ಞಾನೋದಯ, ಕೈಗಾರಿಕಾ ಕ್ರಾಂತಿ ಮತ್ತು ಯುರೋಪಿನಿಂದ ನಡೆದ ಭೂಮಿಯ ದಕ್ಷಿಣ ಗೋಳಾರ್ಧದ ವಸಾಹತೀಕರಣಕ್ಕೂ ಹೆಚ್ಚಿನ ನಂಟಿದೆ. ಬಾಲ್ಯವನ್ನು ಕುರಿತ ಜಾಗತಿಕ ಚರಿತ್ರೆಯೊಂದರ ಪ್ರಯತ್ನದಲ್ಲಿ ನಾವಿನ್ನೂ ತೊಡಗಬೇಕಿದೆಯಾದರೂ, ಯುರೋಪಿನಲ್ಲಿ ಹುಟ್ಟಿದ ಹೊಸ ಶೈಕ್ಷಣಿಕ ವಿಚಾರಗಳು ಮತ್ತು ಮಕ್ಕಳ ಸಾಹಿತ್ಯವನ್ನು ಕುರಿತು ನಮಗಿರುವ ಸೀಮಿತ ಜ್ಞಾನವು ಹೇಳುವುದೇನೆಂದರೆ, ಒಂದೆಡೆ ವ್ಯಕ್ತಿವಾದ (individualism) ಮತ್ತು ಇತರ ಪ್ರಜಾಸತ್ತಾತ್ಮಕ ಮೌಲ್ಯಗಳು ಹಾಗೂ ಇನ್ನೊಂದೆಡೆ ನಗರದ ಐಷಾರಾಮೀ ವರ್ಗವೊಂದರ ಬೆಳವಣಿಗೆಗಳಿಗೂ, ಮತ್ತು ಇವತ್ತಿನ ಬಾಲ್ಯದ ಪರಿಕಲ್ಪನೆಯೊಂದಿಗೆ ವಿಸ್ತೃತ ಸಂಬಂಧವನ್ನು ಹೊಂದಿರುವ ಮಾನದಂಡ ಸಂಬಂಧಿತ ಕಲ್ಪನೆಗಳಿಗೂ ನಂಟಿದೆ. ಉದಾಹರಣೆಗೆ, 19 ಮತ್ತು 20ನೇ ಶತಮಾನದ ಹೊತ್ತಿಗೆ ಶಾಲಾ ಶಿಕ್ಷಣ ಮತ್ತು ಕಾನೂನಿನ ಸುಧಾರಣೆಗಳಲ್ಲಿ ತೊಡಗಿಕೊಂಡ ಅನೇಕ ಪ್ರಗತಿಪರ ಶಿಕ್ಷಕರು ಮತ್ತು ಸುಧಾರಣಾವಾದಿ ಚಿಂತಕರ ಸುದೀರ್ಘ ಹೋರಾಟವಿಲ್ಲದೆ ವಿಶ್ವ ಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಯನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ಜೊತೆಗೆ, ಯುರೋಪಿನ ಸಮಾಜಗಳು ಶಿಶು ಮರಣದ ಪ್ರಮಾಣವನ್ನು ಹತೋಟಿಯಲ್ಲಿಟ್ಟುಕೊಳ್ಳುವಂತೆ, ಸಾರ್ವಜನಿಕ ಆರೋಗ್ಯ ಮತ್ತು ಸ್ವಚ್ಛತೆಯನ್ನು ಸುಧಾರಿಸುವಂತೆ, ಮತ್ತು ಕೆಲವು ಸಾಮಾನ್ಯ ಕಾಯಿಲೆಗಳನ್ನು ಹೋಗಲಾಡಿಸುವಂತೆ ಮಾಡಿದ ವೈಜ್ಞಾನಿಕ ಅನ್ವೇಷಣೆಗಳು ಮತ್ತು ಆವಿಷ್ಕಾರಗಳ ಕೊಡುಗೆಗಳೂ ಅಷ್ಟೇ ಮಹತ್ವದ್ದು [ಏರೀಸ್, 1962].

ಉಳಿವಿನ ಪ್ರಮಾಣದಲ್ಲಾದ ಈ ಬದಲಾವಣೆಯ ಚಕ್ರದ ಸ್ವರೂಪವು ಮೊದಲು ವಸಾಹತೀಕರಣಕ್ಕೆ ಒಳಗಾಗಿದ್ದ ದೇಶಗಳಲ್ಲಿ ಹೇಗಿದೆ ಎನ್ನುವುದು ಇನ್ನೂ ಹೊರಬರುತ್ತಲೇ ಇದೆ. ಆದರೂ, ಬದಲಾವಣೆಗಳ ನಿರ್ದಿಷ್ಟ ಕಥನಗಳು ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಸಂಬಂಧಪಟ್ಟಂತೆ ದೇಶದಿಂದ ದೇಶಕ್ಕೆ ಭಿನ್ನವಾಗಿಯೇ ಇರುತ್ತದೆ, ಅವುಗಳ ಒಳಗಿನ ನಗರಗಳು ಮತ್ತು ಹಳ್ಳಿಗಳ ನಡುವೆಯೂ ವ್ಯತ್ಯಾಸಗಳಿರುತ್ತವೆ. ತಾತ್ಪರ್ಯವಿಷ್ಟೇ, ಬಾಲ್ಯವು ತನ್ನದೇ ವಿಶಿಷ್ಟವಾದ ಅಗತ್ಯಗಳನ್ನು ಹೊಂದಿದ ಬದುಕಿನ ಒಂದು ಮಹತ್ವದ ಘಟ್ಟ ಎನ್ನುವ ಪರಿಕಲ್ಪನೆಯು ಆಧುನಿಕತೆಯ ಹಾದಿಯಲ್ಲಿ ಆದ ವೈಜ್ಞಾನಿಕ ಮತ್ತು ಕೈಗಾರಿಕಾ ಪ್ರಗತಿಯಿಂದ ಹುಟ್ಟಿಕೊಂಡ ವಿಚಾರಧಾರೆಗಳಲ್ಲಿ ಬೇರು ಬಿಟ್ಟಿದೆ ಎನ್ನಬಹುದು. ಈ ಪ್ರಗತಿಯ ಪರಿಣಾಮಗಳು ಸಮಾನವಾಗಿ ಹಂಚಲ್ಪಟ್ಟಿಲ್ಲ ಎನ್ನುವ ಸಂಗತಿಯು ಆಧುನಿಕ ಪೂರ್ವಕಾಲದ ಆ ವಿಚಾರಧಾರೆಯು, ಅಂದರೆ ಬಾಲ್ಯವು ಅನಿಶ್ಚಿತವಾದ, ದುರ್ಬಲವಾದ ಮತ್ತು ಬದುಕಿನ ಒಂದು ಸಣ್ಣ ಘಟ್ಟ ಎನ್ನುವ ಆಲೋಚನಾಕ್ರಮವು ಇನ್ನೂ ಕಣ್ಮರೆಯಾಗಿಲ್ಲ ಎನ್ನುವುದನ್ನು ಹೇಳುತ್ತಿದೆ. ಈ ಎಚ್ಚರಿಕೆಯು ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನಗಳು ಇನ್ನೂ ಪೂರ್ಣ ಪ್ರಮಾಣದಲ್ಲಿ ಅಭಿವೃದ್ಧಿ ಹೊಂದದ, ಅಥವಾ ಹೆಚ್ಚಿನ ಸಾಮಾಜಿಕ ಪ್ರಗತಿ ಮತ್ತು ಸಾಂಸ್ಕೃತಿಕ ಬೆಳವಣಿಗೆಯಂತಹ ವಿಕಾಸಾತ್ಮಕ ಗುರಿಗಳನ್ನು ಸಾಧಿಸುವ ಸಲುವಾಗಿ ಸ್ವಾಭಾವಿಕವಾಗಿ ಅನ್ವಯಗೊಳ್ಳುತ್ತಲೂ ಇರದ ಅಭಿವೃದ್ಧಿ ಹೊಂದುತ್ತಿರುವ

ದೇಶಗಳಿಗೆ ಮಾತ್ರ ಅನ್ವಯಿಸುತ್ತದೆ ಎಂದು ಓದಿಕೊಳ್ಳಬೇಕಾಗಿಲ್ಲ. ಎನ್‌ಲೈಟನ್‌ಮೆಂಟ್‌ನ ಹಲವು ಹತಾರಗಳು ಮನೋ-ಕೌಶಲಗಳಾಗಿದ್ದವು, ಅವುಗಳ ಅಭಿವೃದ್ಧಿ ಮತ್ತು ಅನ್ವಯಗಳು ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಬಾಲ್ಯವನ್ನು ಕುರಿತ ಆಧುನಿಕ ವಿಚಾರಧಾರೆಯು ಖಚಿತ ರೂಪವನ್ನು ಹೊಂದುವ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿವೆ. ಉದಾಹರಣೆಗೆ ಮಕ್ಕಳ ಸಾಹಿತ್ಯದ ಪ್ರಮುಖ ವಿಮರ್ಶಕರಾದ ಪಾಲ್ ಹಝಾರ್ಡ್‌ರವರು ಹೇಳುವ ಹಾಗೆ ಪೂರ್ಣವಿಶ್ವಾಸ ಮತ್ತು ಬದುಕನ್ನು ಕುರಿತ ಪೂರ್ವಾನುಮಾನಗಳು ಮಗುವಿನ ಸ್ವಭಾವದ ಮಹತ್ವದ ಲಕ್ಷಣಗಳಾಗುತ್ತವೆ. ಹೀಗಿರಬೇಕು ಎನ್ನುವ ಬಾಲ್ಯದ ಈ ಮನೋವಿಶಿಷ್ಟ ಲಕ್ಷಣಗಳು ಇರಾಕಿನ ಮೇಲಾದ ಆಕ್ರಮಣವನ್ನು ಒಂದು ಯಶಸ್ಸನ್ನಾಗಿಸಲು ಒಟ್ಟಾದ ದೇಶಗಳಲ್ಲಿ ಹೆಚ್ಚುತ್ತಿರುವ ಭಯೋತ್ಪಾದನೆ ಮತ್ತು ಅದನ್ನು ಕುರಿತು ನಡೆಯುತ್ತಿರುವ ಸೈದ್ಧಾಂತಿಕ ಸಂವಾದಗಳಿಂದ ಅಪಾಯಕ್ಕೊಳಗಾದಂತೆ ಕಂಡುಬರುತ್ತದೆ.

ಒಂದು ಆಧುನಿಕ ಪರಿಕಲ್ಪನೆಯಾಗಿ ಬಾಲ್ಯದ ಚರಿತ್ರೆಯನ್ನು ಆಧುನಿಕ, ಕಲ್ಯಾಣ ರಾಜ್ಯದ ಕಥನಗಳಲ್ಲಿ ಸೇರಿಸಿಕೊಳ್ಳಲಾಗುತ್ತದೆ. ಬದುಕಿನ ಒಂದು ಸಂರಕ್ಷಿತ ಮತ್ತು ಸುದೀರ್ಘ ಅವಧಿಯಾದ ಬಾಲ್ಯವು 18 ಮತ್ತು 19ನೇ ಶತಮಾನದ ಹೊತ್ತಿಗೆ ಕೈಗಾರಿಕಾ ಕ್ರಾಂತಿಯಿಂದಾಗಿ ತಮ್ಮ ಬದುಕಿನಲ್ಲಿ ಮಹತ್ತರ ಬದಲಾವಣೆಗಳುಂಟಾದ ಸಂದರ್ಭದಲ್ಲಿ ದುಡಿಯುವ ವರ್ಗದಿಂದ ಕಲ್ಯಾಣ ರಾಜ್ಯಕ್ಕಾಗಿ ನಡೆದ ಜನಪರ ಹೋರಾಟಗಳಿಗೆ ಋಣಿಯಾಗಿದೆ. ಮಕ್ಕಳ ಮಾನಸಿಕ ಅಗತ್ಯಗಳೂ ಮುಖ್ಯವೇ ಎಂಬುದರ ಮನ್ನಣೆಯು ಬೂರ್ಜ್ವಾ ಜೀವನ ಶೈಲಿಯ ಸಂದರ್ಭದಲ್ಲಿ ಕಾಣಿಸತೊಡಗಿದಾಗ್ಯೂ, ವಿಚಾರಗಳ ಕದನವು ಮಕ್ಕಳನ್ನು ಸಂರಕ್ಷಿಸಿ ಅವರ ಸಲುವಾಗಿಯೇ ಇರುವ ಸಾರ್ವಜನಿಕ ಸಂಸ್ಥೆಗಳ ಅಗತ್ಯವಿದೆ ಎನ್ನುವುದನ್ನು ಕ್ರಮೇಣ ಗುರುತಿಸಲು ದಾರಿಮಾಡಿತು ಎನ್ನುವುದನ್ನು ಈ ಹಿನ್ನೆಲೆಯಲ್ಲಿ ಗ್ರಹಿಸಬೇಕು.ಆರೋಗ್ಯ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದ ಸಾಂಸ್ಥಿಕ ಆರೈಕೆಯ ಕ್ಷೇತ್ರವು ಬೇಸರ ಹುಟ್ಟಿಸುವಷ್ಟು ನಿಧಾನಗತಿಯಲ್ಲಿ ವಿಸ್ತರಿಸ್ಪಡುತ್ತ ಹೋದರೆ, ಶಿಕ್ಷಣ ತಜ್ಞರು ಮತ್ತು ಶಿಕ್ಷಕರು, ಲೇಖಕರು ಮತ್ತು ಚಿತ್ರಕಾರರು, ಕತೆ ಹೇಳುವವರು ಮತ್ತು ಗೊಂಬೆಗಳ ತಯಾರಕರು ಮಾತ್ರ ವಯಸ್ಕರ ಸಂವೇದನಾಶೀಲತೆಯು ಮಗುವಿನ ವಿಶೇಷ ಹಕ್ಕು ಎಂಬ ವಾದವನ್ನು ಮುನ್ನೆಲೆಗೆ ತರುವಂತಹ ಒಂದು ಹೊಸ ಸಂಸ್ಕೃತಿಯನ್ನು ಭರದಿಂದ ರೂಪಿಸತೊಡಗಿದರು. 17ನೇ ಶತಮಾನದಿಂದ ಈಚೆಗಿನ ಯುರೋಪಿನ ಚರಿತ್ರೆಯು ಬಾಲ್ಯವು ಒಂದು ಸಾಮಾಜಿಕ ನಿರ್ಮಿತಿಯಾಗಿ ಹುಟ್ಟಿಕೊಂಡಿದ್ದನ್ನು ವಿವರಿಸುವಂತಹ ಹಲವು ಅಂಶಗಳ ಒಂದು ಪುಂಜವನ್ನೇ ನಮ್ಮ ಮುಂದಿಡುತ್ತದೆ. ಅದನ್ನು ತನ್ನ ಸ್ವಂತದ ಪ್ರಗತಿಯನ್ನು, ಅಥವಾ ಈಗೀಗ ಕರೆಯುವ "ಅಭಿವೃದ್ಧಿ"ಯನ್ನು ಅಳೆಯುವ ಒಂದು ಮಾನದಂಡದಂತೆ ಯುರೋಪೇತರ ಜಗತ್ತು ಇಂದಿಗೂ ಬಳಸುತ್ತ ಬಂದಿದೆ. ಯುರೋಪಿನ ಈ ಚರಿತ್ರೆಯ ಪ್ರಮುಖ ಅಂಶಗಳು ಹೀಗಿವೆ: ಆರೋಗ್ಯ ಮತ್ತು ಸಾರ್ವಜನಿಕ ಸ್ವಚ್ಛತೆಯಲ್ಲಿ ಸುಧಾರಣೆ, ಖಾಸಗಿತನ ಮತ್ತು ಕುಟುಂಬಕ್ಕೆ ಆದ್ಯತೆ ನೀಡುವ ಮಧ್ಯಮ ವರ್ಗದ ಉದಯ, ಲೈಂಗಿಕ ಅಮಾಯಕತನವು ಬಾಲ್ಯದ ಒಂದು ಹೆಗ್ಗುರುತು ಎಂದು ಗುರುತಿಸುವುದು.

ಜಾಗತೀಕರಣವನ್ನು ಕುರಿತ ಸಂವಾದವು ಪ್ರಾರಂಭವಾದ ಎಷ್ಟೋ ಸಮಯದ ಮೊದಲೇ ಬಾಲ್ಯವನ್ನು ಕುರಿತ ಈ ನಿರೂಪಣೆಯು ವಿಶ್ವವ್ಯಾಪಕವಾಗಿತ್ತು. ಜಗತ್ತಿನಾದ್ಯಂತ ಹೆಚ್ಚಿನ ಅಸಲೀ ಮಕ್ಕಳು ಬಡತನ, ಶೋಷಣೆಯ ಸ್ಥಿತಿಗಳಲ್ಲಿ ಬದುಕುತ್ತ, ಉಳಿವಿಗಾಗಿ ಹೋರಾಡುತ್ತ, ಸಾಮಾನ್ಯ ಕಾಯಿಲೆಗಳಿಂದ ಸಾಯುತ್ತಿದ್ದರೆ, 19ನೇ ಶತಮಾನದ ಮಧ್ಯಭಾಗದಲ್ಲಿ ಬಾಲ್ಯದ ಪ್ರತಿರೂಪವು ಒಂದು ಸಂರಕ್ಷಿತ ಸಮಾಜೋ-ಮನೋವೈಜ್ಞಾನಿಕ ವಿಭಾಗವೆಂಬ ನಿಟ್ಟಿನಲ್ಲಿ, ಅವಿರೋಧ ಮಾನದಂಡವಾಗಿ ಮತ್ತು ಶೈಕ್ಷಣಿಕ ಆದರ್ಶದಂತೆ ಜಗತ್ತಿನಾದ್ಯಂತ ಮುಂದುವರೆಯಿತು. ಯುರೋಪಿನಿಂದಲೇ ಹುಟ್ಟಿಕೊಂಡ ಎರಡು ಮಹಾಯುದ್ಧಗಳಿಂದ ಉಂಟಾದ ವಿನಾಶವು ಯುರೋಪಿನ ಮಾದರಿಗೆ ಒತ್ತು ನೀಡಿತು. ಅದರ

ಪರಿಣಾಮವಾಗಿ ವಿಶ್ವಸಂಸ್ಥೆಯ ಒಡಂಬಡಿಕೆಯಲ್ಲಿ ಬಾಲ್ಯವನ್ನು ಒಂದು ಜಾಗತಿಕ ಆತಂಕವೆಂದು ಮಾನ್ಯ ಮಾಡಲಾಯಿತು. 20ನೇ ಶತಮಾನದ ಯುದ್ಧಾನಂತರದ ಅವಧಿಯಲ್ಲಿ, ವಸಾಹತು ದೇಶಗಳು ಸ್ವತಂತ್ರವಾದವು ಮತ್ತು ಪ್ರಜಾಪ್ರಭುತ್ವವನ್ನು ಸ್ವೀಕರಿಸಿದವು. ಹೊಸತಾಗಿ ಸ್ವತಂತ್ರಗೊಂಡ ರಾಷ್ಟ್ರಗಳು ಶಿಶು ಮರಣದ ಪ್ರಮಾಣ ಮತ್ತು ಶಾಲಾ ಶಿಕ್ಷಣ ಸಾರ್ವತ್ರಿಕವಾಗಿ ಲಭ್ಯವಾಗಿಸುವ ಗುರಿಯನ್ನು ಸಾಧಿಸುವಲ್ಲಿ ಅಲ್ಪ ಯಶಸ್ಸನ್ನೇ ಕಂಡರೂ ಬಾಲ್ಯವನ್ನು ಕುರಿತ ವಿಶ್ವವ್ಯಾಪಕ ಆದರ್ಶವು ತಾತ್ಪೂರ್ತಿಕವಾಗಿಯಾದರೂ ರಾಜಕೀಯ ಮತ್ತು ಕಾನೂನಿನ ಮಾಧ್ಯಮವನ್ನು ಉಳಿಸಿಕೊಂಡಿತು.

**ಇವತ್ತಿನ ಸಂದರ್ಭ**

1980ರ ಪ್ರಾರಂಭದ ನಂತರ ಪ್ರಚಲಿತಗೊಂಡ ಪ್ರವೃತ್ತಿಗಳನ್ನು ಗಮನದಲ್ಲಿಟ್ಟುಕೊಂಡು ನಾವು ಬಾಲ್ಯದ ಮೇಲೆ ಜಾಗತೀಕರಣಕ್ಕೆ ಸಂಬಂಧಪಟ್ಟ ಅಂಶಗಳ ಪರಿಣಾಮವನ್ನು ಜ್ಞಾನ, ಸಂಸ್ಕೃತಿ ಮತ್ತು ಅರ್ಥವ್ಯವಸ್ಥೆ ಎಂಬ ಮೂರು ಸ್ಥೂಲ ಅಂಶಗಳ ಸಹಾಯದಿಂದ ವಿಶ್ಲೇಷಿಸಬಹುದು. ಇವುಗಳಲ್ಲಿ ಮೊದಲನೆಯದು ಕಲಿಕೆಗೆ ಸಂಬಂಧಿಸಿದೆ. ಈ ಕಲಿಕೆಯು ಬಾಲ್ಯವನ್ನು ಕುರಿತ ಆಧುನಿಕ ಪರಿಕಲ್ಪನೆಗಳೊಂದಿಗೆ ನಿಕಟ ಸಂಬಂಧವನ್ನು ಹೊಂದಿದ್ದು, ಈಗ ಕಲಿಕೆಯತ್ತ ಗಮನಹರಿಸದ ಬಾಲ್ಯದ ಒಂದು ಕಲ್ಪನೆಯನ್ನು ಮಾಡಲೇ ಸಾಧ್ಯವಿಲ್ಲ. ಹಾಗೆ ನೋಡಿದರೆ, ನಾವು ಈಗ ವ್ಯಾಖ್ಯಾನಿಸುವ ಅರ್ಥದ ಕಲಿಕೆಯ ವಿಕಾಸದೊಂದಿಗೆ ಬಾಲ್ಯವು ಬದುಕಿನ ಒಂದು ವಿಶೇಷವಾದ ಮತ್ತು ಸುದೀರ್ಘವಾದ ಅವಧಿ ಎಂಬ ಕಲ್ಪನೆಯೂ ವಿಕಾಸಗೊಳ್ಳುತ್ತಿದೆ. ಈಗ ಅನುಭವ ಮತ್ತು ಚಟುವಟಿಕೆಗಳು ಬಾಲ್ಯದ ಎರಡು ಅತೀ ಮುಖ್ಯವಾದ ಆಯಾಮಗಳೆನಿಸಿಕೊಂಡಿವೆ, ಹಾಗೂ ಈ ನಿರ್ದಿಷ್ಟ ಅರ್ಥದಲ್ಲಿ ಕಲಿಕೆಯ ಈ ಕಲ್ಪನೆಯು 18ನೇ ಶತಮಾನದಲ್ಲಿ ರೂಸೋನಿಂದ ಆರಂಭವಾಗಿ ನಂತರ ಫ್ರೊಬೆಲ್, ಪೆಸ್ಟಲೋಝಿ, ಮಾಂಟೆಸ್ಸರಿ, ಪಿಯಾಜೆ ಮತ್ತು ಡ್ಯೂವಿಯಂತಹ ವಿದ್ವಾಂಸರ ಪ್ರಭಾವಶಾಲಿ ಕೃತಿಗಳ ಬೌದ್ಧಿಕ ಪರಂಪರೆಯಿಂದ ಬಹುವಾಗಿ ಪ್ರಭಾವಿತಗೊಂಡಿದೆ. ಈ ವಿಚಾರಧಾರೆಯ ಪರಂಪರೆಯನ್ನು ನೋಡುವುದಾದರೆ ಅದು ಕೈಗಾರಿಕಾ ಕ್ರಾಂತಿಯಿಂದ ಪ್ರಚೋದಿತಗೊಂಡ ಸಮಾಜೋ-ಸಾಂಸ್ಕೃತಿಕ ಮತ್ತು ಆರ್ಥಿಕ ಬೇಡಿಕೆಗಳ, ಹಾಗೂ ಅರಿವು ಮತ್ತು ಸುಧಾರಣೆಗೆ [ಬ್ರೂಕ್ಸ್, 1969] ಸಂಬಂಧಿಸಿದ ಬೌದ್ಧಿಕ ಪಲ್ಲಟಗಳ ಒಂದು ಚಾರಿತ್ರಿಕ ಸಂದರ್ಭ; ಮತ್ತು ಬಾಲ್ಯವು ಲೈಂಗಿಕವಾಗಿ ಒಳ್ಳೆಯದು ಯಾವುದು ಅಥವಾ ಕೆಟ್ಟದ್ದು ಯಾವುದು ಎಂದು ಗೊತ್ತಿರದ ಒಂದು ಮುಗ್ಧ ಅವಧಿ ಎಂಬ ಕಲ್ಪನೆಯ ಮೂಲಕ ಅದು [ಆ ವಿಚಾರಧಾರೆಯು] ಆಧುನಿಕ ಬಾಲ್ಯವನ್ನು ಕುರಿತ ಸಂಕೀರ್ಣ ಪರಂಪರೆಯನ್ನು ಸರಿಯಾಗಿ ಸಾರಾಂಶೀಕರಿಸಿದೆ. ಈ ಅರ್ಥದ ಮುಗ್ಧತೆಯ ಸಂರಕ್ಷಣೆಯು ಮಕ್ಕಳನ್ನು ನೋಡಿಕೊಳ್ಳಲಿಕ್ಕಾಗಿ ರೂಪಿಸಲ್ಪಟ್ಟ ಸಂಸ್ಥೆಗಳ ಮೂಲಕ ವಯಸ್ಕರ ಜಗತ್ತಿನಿಂದ ಮಕ್ಕಳ ಜಗತ್ತಿನ ಬೇರ್ಪಡಿಕೆಯನ್ನು ಅವಲಂಬಿಸಿತ್ತು. ಕ್ರಮೇಣ ಸಾರ್ವತ್ರಿಕ ಶಿಕ್ಷಣದ ಕಲ್ಪನೆಯು ಬೆಳೆದು, ಆ ಮೂಲಕ ಮಕ್ಕಳು ತಮ್ಮ ದಿನದ ಬಹುಮುಖ್ಯವಾದ ಭಾಗವನ್ನು ತರಬೇತಿ ಹೊಂದಿದ ವಯಸ್ಕರು ನಿಗಾ ವಹಿಸುವ ಸಂಸ್ಥೆಯೊಂದರಲ್ಲಿ ಕಳೆಯುವ ಹಾಗಾಯಿತು. ಇದು ಮಗುವಿನ ಜಗತ್ತನ್ನು ವಯಸ್ಕರ ಜಗತ್ತಿನಿಂದ ಬೇರ್ಪಡಿಸುವ ಪ್ರಕ್ರಿಯೆಯ ಒಂದು ಅಂಶ; ಮತ್ತೊಂದು ಅಂಶವೆಂದರೆ ಚಿಕ್ಕ ಕುಟುಂಬದ ಉದಯ ಮತ್ತು ವಾಸಿಸುವ ಸ್ಥಳವನ್ನು ವ್ಯವಸ್ಥೆಗೊಳಿಸುವ ನಿಟ್ಟಿನಲ್ಲಿ ಖಾಸಗಿತನವನ್ನು ಒಂದು ವಿಷಯವಾಗಿ ಗುರುತಿಸಲು ತೊಡಗಿದ್ದು.

ಸೀಮಿತ ಚೌಕಟ್ಟನ್ನು ಹೊಂದಿದ ಜಗತ್ತಿನೊಳಗೆ ಮಕ್ಕಳು ಕಲಿಕೆಯ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕಿತ್ತು, ಅಲ್ಲಿ ತರಬೇತಿ ಹೊಂದಿದ ಶಿಕ್ಷಕರು ಮಗುವು ತೊಡಗಿಕೊಳ್ಳಬಹುದಾದಂತಹ ಚಟುವಟಿಕೆಗಳ ಮೂಲಕ ಮಕ್ಕಳಿಗೆ ಅರ್ಥಪೂರ್ಣ ಅನುಭವಗಳನ್ನು ಒದಗಿಸುತ್ತಾರೆ. ಮಗುವಿಗೆ ನೇರವಾಗಿ ಸಂಬಂಧಿಸಿದ ಮನೆಯ ಪರಿಸರದ ಆಚೆಗೆ, ಅಂದರೆ ಮನೆಯ ಹೊರಗಿನ ಜಗತ್ತಿನೊಂದಿಗೆ ಮಗುವು ಯಾವ

ಗತಿಯಲ್ಲಿ ಮತ್ತು ಯಾವ ಸ್ವರೂಪದಲ್ಲಿ ಒಡನಾಡಬೇಕು ಎನ್ನುವುದನ್ನೂ ಅವರು ನಿಯಂತ್ರಿಸುತ್ತಿದ್ದರು. ಒಂದು ಆಧುನಿಕ ಸಂಸ್ಥೆಯಾಗಿ ಶಾಲೆಯು ಮಗುವನ್ನು ವೃತ್ತಿಪರವಾಗಿ ನಿರ್ವಹಿಸಲ್ಪಡುವ ಜಗತ್ತಿನೊಳಗೆ ಇರಿಸಿತು ಮತ್ತು ಈ ಜಗತ್ತು ಮಗುವಿಗೆ ಅರ್ಥಪೂರ್ಣ ಅನುಭವಗಳನ್ನು ಒದಗಿಸಿತು, ಹಾಗೂ ಮಗುವಿನ ಬೆಳವಣಿಗೆಗೆ ಸಹಾಯಕವಾಗದ ಅನುಭವಗಳನ್ನು ಸೋಸಿತು ಅಥವಾ ವಿರೋಧಿಸಿತು. ಮಗುವಿಗೆ ಬೋಧನೆಯ ದೃಷ್ಟಿಯಿಂದ ಮತ್ತು ನೈತಿಕವಾಗಿಯೂ ಸಮರ್ಪಕವಾದ ಪಠ್ಯಕ್ರಮವೊಂದರ ಅವಶ್ಯಕತೆ ಇದೆ ಎಂಬುದರ ಅರಿವಿಗಾಗಿ ಶಿಕ್ಷಕರು ವಿಶೇಷ ತರಬೇತಿಯನ್ನು ಪಡೆದರು. ಈ ಪಾತ್ರ ನಿರ್ವಹಣೆಯಲ್ಲಿ ಶಿಕ್ಷಕರಿಗೆ ಇತರ ತಜ್ಞರ ನೆರವೂ ಸಿಗುತ್ತದೆ. ಜ್ಞಾನವನ್ನು ಅರ್ಥಮಾಡಿಕೊಂಡು ಅರಗಿಸಿಕೊಳ್ಳಬಹುದಾದ ತನ್ನ ಸಾಮರ್ಥ್ಯಕ್ಕೆ ತಕ್ಕಂತೆ ಮಗು ಜ್ಞಾನವನ್ನು ಪಡೆಯುವಂತಾಗುವ ಒಂದು ಪಠ್ಯಕ್ರಮವನ್ನು ಈ ತಜ್ಞರು ರೂಪಿಸುತ್ತಾರೆ. ಶೈಕ್ಷಣಿಕ ಸಿದ್ಧಾಂತಗಳ ಪ್ರಗತಿಪರ ಎನಿಸಿಕೊಳ್ಳುವ ನಿಲುವಿನಲ್ಲಿ ಮಗುವಿನ ನಿಕಟ ಸಾಮಾಜಿಕ ಪರಿಸರಕ್ಕೆ (milieu) ಒಂದು ವಿಶೇಷ ಸ್ಥಾನವಿದೆ, ಅದನ್ನು ಕಲಿಕೆಯ ಒಂದು ಸಂಪನ್ಮೂಲದಂತೆ ನೋಡಲಾಗುತ್ತದೆ. ಸಮುದಾಯವೊಂದರ ವಿಶಿಷ್ಟ ಕ್ರಿಯೆಗಳು, ಸಂಬಂಧಗಳ ಸ್ವರೂಪವನ್ನು ಕುರಿತು ಮಗುವಿಗೆ ದೊರೆಯುವ ಸಾಮಾಜೀಕರಣದಲ್ಲಿ ಸಾಮಾಜಿಕ ಪರಿಸರದ ಪಾತ್ರ ಪ್ರಮುಖವಾದದ್ದು ಎನ್ನುತ್ತ ಡ್ಯೂವಿ ಅದನ್ನು ಪಠ್ಯಕ್ರಮದ ನಾಲ್ಕು ಸಾಮಾನ್ಯ ಅಂಶಗಳಲ್ಲಿ ಒಂದೆಂಬಂತೆ ಗ್ರಹಿಸುತ್ತಾರೆ.

ಬಾಲ್ಯವನ್ನು ಕುರಿತ ಆಧುನಿಕ ಪರಿಕಲ್ಪನೆಯೊಂದಿಗೆ ಸಮಾನಾಂತರವಾಗಿರುವ ಶೈಕ್ಷಣಿಕ ಆದರ್ಶಗಳ ಸಂಕ್ಷಿಪ್ತ ವಿವರಗಳನ್ನು ಇವತ್ತಿನ ಬೆಳವಣಿಗೆಗಳ ಜೊತೆಜೊತೆಗೇ ಗ್ರಹಿಸಿದಾಗ ಮಗುವು ಜಗತ್ತಿನೊಂದಿಗೆ ಮುಖಾಮುಖಿಯಾಗುವ ಪ್ರಕ್ರಿಯೆಗಳನ್ನು ನಿಯಂತ್ರಿಸುವ ಸಂಸ್ಥೆಗಳು ತಮಗಿರುವ ನಿಯಂತ್ರಣ ಸಾಮರ್ಥ್ಯದಲ್ಲಿ ಆ ಕಾರ್ಯವನ್ನು ನಿಭಾಯಿಸಲು ಪರದಾಡುತ್ತಿರುವುದನ್ನು ನಾವು ಕಾಣಬಹುದು. ಕುಟುಂಬ, ನೆರೆಹೊರೆ, ಅಥವಾ ಸಮುದಾಯ ಮತ್ತು ಶಾಲೆಯನ್ನು ನಾವು ಗಮನಿಸಿದಾಗ ಅವುಗಳಲ್ಲಿ ಒಂದು ಮಟ್ಟದ ದಣಿವು ಕಾಣಿಸಿಕೊಂಡಂತಿದೆ, ಮಗು ಮತ್ತು ವಯಸ್ಕ ಜಗತ್ತಿನ ನಡುವೆ ಮಧ್ಯವರ್ತಿಗಳಾಗಿ ಕಾರ್ಯ ನಿರ್ವಹಿಸಲು ಅವರಲ್ಲಿ ಸಾಮರ್ಥ್ಯವೂ ಇದ್ದಂತಿಲ್ಲ, ಶಕ್ತಿಯೂ ಇದ್ದಂತಿಲ್ಲ. ಮಕ್ಕಳು ಪ್ರವೃತ್ತರಾಗಿರುವ ಭೌತಿಕ ಮತ್ತು ಬೌದ್ಧಿಕ ಜಾಗಗಳ ಆಕ್ರಮಣವು ಇಲೆಕ್ಟ್ರಾನಿಕ್ ಪ್ರಸರಣದ ಆರಂಭದ ತಂತ್ರಜ್ಞಾನಗಳೊಂದಿಗೆ ಪ್ರಾರಂಭಗೊಂಡಿತು; ಅಂತರ್ಜಾಲದಲ್ಲಿ ಹರಿಯಬಿಡುವ ಅನಿರ್ಬಂಧಿತ ಜ್ಞಾನದಿಂದ ಮಕ್ಕಳನ್ನು ರಕ್ಷಿಸಲು ಅಂತರ್ಜಾಲವು ಹಿಂದೆಂದೂ ಕಾಣದ ರೀತಿಯಲ್ಲಿ ವಯಸ್ಕರಿಗೆ ಕಠಿಣ ಸವಾಲನ್ನು ಒಡ್ಡಿತು. ಅದರಲ್ಲೂ ಮುಖ್ಯವಾಗಿ ಲೈಂಗಿಕ ಜ್ಞಾನದ ವ್ಯಾಪ್ತಿಯಲ್ಲಿ ಒಳ್ಳೆಯದು ಮತ್ತು ಕೆಟ್ಟದ್ದರ ತಿಳುವಳಿಕೆಯ ನಿಟ್ಟಿನ ಕಟ್ಟಳೆಯು ಆಧುನಿಕ ಬೋಧನೆಯ ಬಹುದೊಡ್ಡ ಕಾಳಜಿಯಾಯಿತು. ಈಗಂತೂ ಅಂತಹ ಜ್ಞಾನವು ಮಿತಿಮೀರದಂತೆ ಹತೋಟಿಗೊಳಿಸುವುದು ಸಾಧ್ಯವೇ ಇಲ್ಲ; ಲೈಂಗಿಕ ಜ್ಞಾನಕ್ಕೆ ಸಂಬಂಧಿಸಿದಂತೆ ಮಕ್ಕಳು ಅದರ ಸುಳಿಯೊಳಗೆ ಸಿಲುಕದಂತೆ ಹಾಗೂ ಲೈಂಗಿಕ ದುರುಪಯೋಗಕ್ಕೆ ತುತ್ತಾಗದಂತೆ ಅವರನ್ನು ರಕ್ಷಿಸುವಲ್ಲಿನ ಕಷ್ಟವು ವೃದ್ಧಿಸುತ್ತಲೇ ಇದೆ.

**ಮಕ್ಕಳು ಮತ್ತು ಪ್ರವಾಸೋದ್ಯಮ**

ಮಕ್ಕಳ ಅಸಹಾಯಕತೆಗಳಿಗೆ ಹೀಗೆ ಗುರಾಣಿಯೇ ಇಲ್ಲದಂತಾಗುವ ಸ್ಥಿತಿಯ ಸಾಮಾಜಿಕ ಸ್ವರೂಪವು ಅಭಿವೃದ್ಧಿ ಹೊಂದಿದ ಮತ್ತು ಹೊಂದುತ್ತಿರುವ ದೇಶಗಳಲ್ಲಿ ವಿಭಿನ್ನವಾಗಿದ್ದಾಗ್ಯೂ, ಈ ವಿದ್ಯಮಾನವು ಎರಡೂ ದೇಶಗಳಲ್ಲಿ ಅಸ್ತಿತ್ವದಲ್ಲಿದೆ ಮತ್ತು ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಲೇ ಇದೆ. ಲೈಂಗಿಕ ದೌರ್ಜನ್ಯವು ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಕುಟುಂಬವೆಂಬ ಪ್ರಮಾಣಕ ವ್ಯವಸ್ಥೆಯ ಅವನತಿ, ಮತ್ತು ಕುಡಿತದ ಚಟ, ಕೌಟುಂಬಿಕ ಹಿಂಸೆ, ಮಾದಕ ವಸ್ತುಗಳ ವ್ಯಾಪನೆಯ ಪರಿಣಾಮವೆಂದು ಹೇಳಲಾಗುತ್ತದೆ; ಮತ್ತೊಂದೆಡೆ,

ಅಭಿವೃದ್ಧಿ ಹೊಂದುತ್ತಿರುವ ಅನೇಕ ದೇಶಗಳಲ್ಲಿ ಮಕ್ಕಳ ಮೇಲಾಗುವ ಲೈಂಗಿಕ ದೌರ್ಜನ್ಯಕ್ಕೂ ಮತ್ತು ಅತಿವೇಗದಲ್ಲಿ ಬೆಳೆಯುತ್ತಿರುವ ಪ್ರವಾಸೋದ್ಯಮಕ್ಕೂ ಸಂಬಂಧವಿದೆ ಎನ್ನಲಾಗುತ್ತದೆ. ಭಾರತದ ಕರಾವಳಿ ಪ್ರದೇಶದಲ್ಲಿನ ಜೀವನಾಧಾರ, ಕುಟುಂಬಗಳು ಮತ್ತು ಸಮುದಾಯಗಳ ದತ್ತಾಂಶಗಳ ನೆರವಿನೊಂದಿಗೆ ಶೇಷಾದ್ರಿ ಮತ್ತು ಸುರೇಶ್ (2004) ಪ್ರವಾಸೋದ್ಯಮ ಮತ್ತು ಬಾಲ್ಯದ ಲೈಂಗಿಕ ದೌರ್ಜನ್ಯದ ನಡುವಿನ ಸಂಬಂಧವನ್ನು ಕುರಿತ ಅಧ್ಯಯನವನ್ನು ಕೈಗೊಂಡರು. ಈ ಅಧ್ಯಯನವು ಪ್ರವಾಸಕ್ಕೆಂದು "ಹೊರಡುವ" ತಾಣ (ನಿರ್ಗಮನದ ಬಿಂದು) ಮತ್ತು "ತಲುಪಲಿರುವ ತಾಣಗಳ" ನಡುವೆ ಇರುವ ಸಾಂಸ್ಕೃತಿಕ ಮತ್ತು ಅಧಿಕಾರದ ಸಂಬಂಧಗಳ ಒಂದು ಸ್ಥೂಲ ಚಿತ್ರಣವನ್ನು ನೀಡಲು ಯತ್ನಿಸುತ್ತದೆ. ಅವರ ಪ್ರಕಾರ ನಿರ್ಗಮನದ ಬಿಂದುವು ಶ್ರೀಮಂತ ಅಥವಾ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ನೆಲೆಗೊಂಡಿದ್ದರೆ ತಲುಪುವ ತಾಣವು ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ನೆಲೆಗೊಂಡಿರುತ್ತದೆ. ಜಾಗದ (space) ಪರಿಕಲ್ಪನೆಯು ಪರಿಧಿಯಾಚೆಗೆ ಕ್ರಮಿಸುವುದು ಜಾಗತೀಕರಣದ ಒಂದು ಪ್ರಮುಖ ಸ್ವರೂಪವೆನಿಸಿದೆ. ಇತ್ತೀಚಿನ ದಿನಗಳಲ್ಲಿ ಪ್ರವಾಸೋದ್ಯಮವು ಹಿಂದೆಂದೂ ಕಾಣದ ರೀತಿಯಲ್ಲಿ ಬೆಳೆಯುವುದಕ್ಕೆ ವಾಕರ್‌ಮನ್ (1997) ಹೇಳುವಂತೆ "ದೂರ(ಅಂತರ)ದ ಸಾಪೇಕ್ಷೀಕರಣವು ಒಂದು ಮಿತಿಯಾಗಿರುವುದು" ಕಾರಣವಾಗಿದೆ. ವಿನೋದ ಮತ್ತು ವಿಹಾರದ ವಿಭಾಗವನ್ನು ವಿಸ್ತರಿಸಿರುವುದು ಜಾಗತೀಕರಣದ ಸಾಂಸ್ಕೃತಿಕ ಚಿಂತನೆಯ ಒಂದು ಸ್ವರೂಪವಾಗಿದೆ. ಈ ಚಿಂತನೆಯು ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ "ಪ್ರವಾಸಿ ತಾಣಗಳ" ಸೇರ್ಪಡೆ ಹೆಚ್ಚಾಗುತ್ತ ಹೋಗುವುದು ಆ ದೇಶಗಳು ಅಭಿವೃದ್ಧಿ ಹೊಂದುತ್ತಿರುವುದರ ಪ್ರತೀಕವೆಂದು ಪರಿಗಣಿಸುತ್ತದೆ. ಪಾರಂಪರಿಕ ವೃತ್ತಿಗಳು ಕಣ್ಮರೆಯಾಗುತ್ತಿರುವುದು ಮತ್ತು ಪ್ರವಾಸೋದ್ಯಮದ ಸಂಸ್ಥೆಗಳಿಗೆ ಸ್ಥಳೀಯ ವಸತಿಗಳನ್ನು ಸ್ಥಳಾಂತರಿಸುತ್ತಿರುವಂತಹ ಘಟನೆಗಳ ನಿಟ್ಟಿನಲ್ಲಿ ಈ ತಾಣಗಳಲ್ಲಾಗುವ ಆಂತರಿಕ ಪ್ರಕ್ರಿಯೆಗಳನ್ನು ಅಧ್ಯಯನ ಮಾಡಿದರೆ, ಪ್ರವಾಸೋದ್ಯಮದ ಹೊಸ ಆರ್ಥಿಕ ಆಯಾಮದಲ್ಲಿ ಅಂಚಿಗೆ ಸರಿಸಲ್ಪಟ್ಟ ಮಕ್ಕಳು ಮತ್ತು ಅವರ ಮೇಲಾಗುವ ಪರಿಣಾಮಗಳನ್ನು ಅದು ಮುನ್ನೆಲೆಗೆ ತರುತ್ತದೆ.

ಪ್ರವಾಸೋದ್ಯಮದಲ್ಲಿ ಮಕ್ಕಳ ಶೋಷಣೆ ಮತ್ತು ಅವರ ಮೇಲಾಗುವ ದೌರ್ಜನ್ಯವನ್ನು ಕೇವಲ ಬಡತನದ ಪರಿಣಾಮವೆನ್ನುವುದು ಖಂಡಿತ ಸರಿಯಲ್ಲ. ಪ್ರವಾಸೋದ್ಯಮದ ಅಂಗವಾಗಿ ಪ್ರವಾಸೀ ಪ್ಯಾಕೇಜ್‌ಗಳನ್ನು ರೂಪಿಸುವಾಗ ಒಂದು ಸ್ಥಳವು ಪ್ರವಾಸೀ ತಾಣವಾಗಿ ಪರಿವರ್ತನೆಯಾಗುವುದರ ಫಲವಾಗಿ ಅಲ್ಲಿ ಬಡತನವೆನ್ನುವುದು ಒಂದು ಸಾಪೇಕ್ಷ ಸ್ಥಿತಿಯಾಗುತ್ತದೆ. ಕರಾವಳಿ ತೀರವೊಂದನ್ನು 'ಬೀಚ್' ಆಗಿಯೋ ಅಥವಾ ಕಾಡೊಂದನ್ನು 'ಗಾಲ್ಫ್' ಮೈದಾನವನ್ನಾಗಿಯೋ ವಿನ್ಯಾಸ ಮಾಡುವಾಗ ಅಲ್ಲಿರುವ ಸ್ಥಳೀಯ ಸಮುದಾಯಗಳ ಸ್ಥಾನಪಲ್ಲಟ ಮತ್ತು ಅವರ ಪಾರಂಪರಿಕ ವೃತ್ತಿಗಳ ನಾಶವು ಅನಿವಾರ್ಯವಾಗುತ್ತದೆ. ಈ ಪ್ರಕ್ರಿಯೆಗಳಿಂದಾಗಿ ಮಕ್ಕಳು ಆರಂಭದಲ್ಲಿ ರೂಮ್ ಬಾಯ್‌ಗಳಾಗಿ, ನಂತರ ಥಳುಕುಪಳುಕಿನ ಸಾಮಾನು, ಒಡವೆಗಳನ್ನು ಮಾರಾಟ ಮಾಡುವವರಾಗಿ, ಕ್ರಮೇಣ ವೇಶ್ಯಾವೃತ್ತಿಗೂ ಇಳಿಯುವವರೆಗೆ ಪ್ರವಾಸೋದ್ಯಮ ವ್ಯವಸ್ಥೆಯ ಒಂದು ಭಾಗವಾಗುವುದನ್ನು ತಪ್ಪಿಸಲಾಗುವುದಿಲ್ಲ. ಬ್ಯಾಂಕಾಕ್ ಮತ್ತು ಗೋವಾದಂತಹ ಉತ್ತಮ ಅಭಿವೃದ್ಧಿ ಹೊಂದಿದ, ಯಶಸ್ವೀ ತಾಣಗಳ ಅಧ್ಯಯನವು ಜಾಗತೀಕರಣದ ಕೃಪಾಕಟಾಕ್ಷದಲ್ಲಿ ವಿಹಾರಾರ್ಥ ಪ್ರವಾಸೋದ್ಯಮದ ಸರಕೀಕರಣ (commodification) ಮತ್ತು ವಿಸ್ತರಣೆಗಳು ಅಲ್ಲಿಯ ಮಕ್ಕಳ ಮೇಲೆ ನಕಾರಾತ್ಮಕ ಪರಿಣಾಮಗಳನ್ನು ಬೀರಿವೆಯೆಂಬ ಅಭಿಪ್ರಾಯಕ್ಕೆ ಪುರಾವೆಯನ್ನು ಒದಗಿಸುತ್ತದೆ. ಮಕ್ಕಳ ಕಳ್ಳಸಾಗಾಣಿಕೆಯು ಮಕ್ಕಳ ಹಕ್ಕುಗಳನ್ನು ಕುರಿತ ಸಂವಾದಗಳು ಅರ್ಥಹೀನವಾಗುವಷ್ಟು ಪ್ರಮಾಣದಲ್ಲಿ ಬೆಳೆದಿದೆ.

**ಶಾಲಾ ಶಿಕ್ಷಣ, ಅಸ್ಮಿತೆ ಮತ್ತು ಸಂಘರ್ಷ**

ವಯಸ್ಕರ ಪೂರ್ವಗ್ರಹಗಳು ಮತ್ತು ಕಾಳಜಿಗಳು ಹಾಗೂ ಮಕ್ಕಳ ಜಗತ್ತು ಇವೆರಡರ ನಡುವೆ ಒಂದು ಸೇತುವೆಯಾಗಿ ನಿರ್ವಹಿಸಲ್ಪಡುವ ಶಾಲೆಯ ಪಾತ್ರವೂ ಹೊಸ ಬಗೆಯ ಒತ್ತಡವನ್ನು ಅನುಭವಿಸುತ್ತಿದೆ. ಸಂವಹನಾತ್ಮಕ ತಂತ್ರಜ್ಞಾನಗಳಿಗೂ ಶಾಲೆಯೊಂದು ನಿರ್ವಹಿಸುವ ಜವಾಬ್ದಾರಿಗಳಿಗೂ ಇರುವ ವ್ಯತ್ಯಾಸವನ್ನು ಗ್ರಹಿಸಲು ಜ್ಞಾನ ಮತ್ತು ಮಾಹಿತಿಯ ನಡುವಿನ ಅಂತರವು ನಿಸ್ಸಂಶಯವಾಗಿ ಒಂದು ಪ್ರಮುಖವಾದ ಅಂಶವಾಗಿದೆ. ಅದು ಶಾಲೆಯೊಂದು ಎಷ್ಟರಮಟ್ಟಿಗೆ ವಿನ್ಯಾಸಗೊಳಿಸಲ್ಪಟ್ಟ ಪಠ್ಯಕ್ರಮ ಮತ್ತು ನುರಿತ ಶಿಕ್ಷಕರ ಬೌದ್ಧಿಕ ಸಂಪನ್ಮೂಲಗಳೊಂದಿಗೆ ಮಕ್ಕಳು ಜ್ಞಾನವನ್ನು ರೂಢಿಸಿಕೊಳ್ಳುತ್ತ ಕಲಿಕಾ ಅನುಭವವನ್ನು ಪಡೆಯಲು ಶಕ್ಯವಾಗುವಂತೆ ತನ್ನ ವಿದ್ಯಾರ್ಥಿಗಳಿಗೆ ಸಮಾಜವ್ಯವಸ್ಥೆಯ ಗುಣವಿಶೇಷಗಳನ್ನು ಒದಗಿಸುವ ಸಾಮರ್ಥ್ಯವನ್ನು ಹೊಂದಿದೆ ಎನ್ನುವುದನ್ನು ಅವಲಂಬಿಸಿದೆ. ಜಾಗತೀಕರಣವು ಆಧುನಿಕ ಶಿಕ್ಷಣದ ಸ್ಪರ್ಧಾತ್ಮಕ ಸ್ವರೂಪಕ್ಕೆ ಮತ್ತಷ್ಟು ಮಹತ್ತ್ವವನ್ನು ನೀಡಿದೆ ಮತ್ತು ಜಗತ್ತಿನಾದ್ಯಂತ ಎಲ್ಲಾ ರಾಷ್ಟ್ರಗಳ ಶಿಕ್ಷಣ ವ್ಯವಸ್ಥೆಗಳು ಬೋಧನೆಯ ಅಳೆಯಬಹುದಾದ ಫಲಿತಗಳತ್ತ ಕೇಂದ್ರೀಕರಿಸುವಂತೆ ಒತ್ತಾಯಪಡಿಸಿದೆ. ಅದರೊಂದಿಗೆ, ಮಕ್ಕಳ ಕಲಿಕಾ ಅನುಭವದ ಗುಣಮಟ್ಟಕ್ಕೆ ಗಮನ ಕೊಡುತ್ತಿದ್ದ ಮುಂಚಿನ ಕಟ್ಟಳೆಗಳು ಮತ್ತು ಆದ್ಯತೆಗಳು ಈಗ ಅಪ್ರಸ್ತುತವೆನಿಸುವ ಹಾಗೆ, ಅವು ಜನರ ಮೆಚ್ಚುಗೆಯನ್ನು ಗಳಿಸಲು ವಿಫಲವಾಗುವ ಹಾಗೆ ಮಾಡಿವೆ. ಅನುಭವದಿಂದ ದೂರಸರಿದು ಫಲಿತಾಂಶವನ್ನು ಆಧರಿಸಿದ ಬೋಧನೆಯತ್ತ ನಡೆದ ಪಲ್ಲಟವು ಮಾಹಿತಿ ಮತ್ತು ಜ್ಞಾನದ ನಡುವಿನ ಅಂತರವನ್ನು ಮಸುಕುಗೊಳಿಸಿದೆ. ವೃತ್ತಿಪರ ಚಟುವಟಿಕೆಯಾದ ಬೋಧನೆಯ ಮೇಲೆ ಇದು ಗಂಭೀರ ಪರಿಣಾಮವನ್ನು ಬೀರುತ್ತದೆ. ಈಗ ಶಿಕ್ಷಕ/ಶಿಕ್ಷಕಿಯು ತನ್ನ ಸ್ವಂತದ ಬುದ್ಧಿಯನ್ನು ಅನ್ವಯಿಸುವ ಒಬ್ಬ ಬೋಧಕ/ಬೋಧಕಿಯಾಗದೇ, ದತ್ತ (given) ಸೂಚನೆಗಳನ್ನು ಅನ್ವಯಿಸುತ್ತ ಎಲ್ಲ ಕಡೆಗಳಲ್ಲೂ ಕಂಡುಬರುವ ಒಬ್ಬ ಜ್ಞಾನಸೇವಾ ಕಾರ್ಯಕರ್ತನ/ಳ ಪಾತ್ರವನ್ನು ನಿಭಾಯಿಸುತ್ತಿರುತ್ತಾನೆ/ಳೆ. ಅಷ್ಟೇ ಅಲ್ಲ, ಶಿಕ್ಷಕರನ್ನು ಈಗ ಗಂಭೀರವಾಗಿ ಪರಿಗಣಿಸುವುದೂ ನಿಲ್ಲುತ್ತದೆ, ಶಿಕ್ಷಕನ ಜಾಗದಲ್ಲಿ ಸ್ವ-ಬೋಧನೆಯ ಪ್ಯಾಕೇಜುಗಳೊಂದಿಗೆ ಗ್ರಾಹಕರನ್ನು ಆಕರ್ಷಿಸುವ ಒಂದು ಮಾಹಿತಿ ಯಂತ್ರದಿಂದ ಶಿಕ್ಷಕರು ಅಲ್ಪಕಾಲಿಕ ನಿಯುಕ್ತಿಗೆ ಒಳಪಟ್ಟು, ಮಾಹಿತಿ ಮತ್ತು ಜ್ಞಾನದ ನಡುವಿನ ಭಿನ್ನತೆಯು ಇಲ್ಲವಾಗುವುದೆಂದರೆ ಸಾಂಸ್ಕೃತಿಕವಾಗಿ ಬಹುಮುಖ್ಯವಾದ ಒಂದು ಬದಲಾವಣೆಯನ್ನು ನಾವು ಕಾಣುತ್ತಿದ್ದೇವೆ ಎಂದು ಅರ್ಥ. ಅಂದರೆ ತಲೆಮಾರಿನಿಂದ ತಲೆಮಾರಿಗೆ ಅನುಭವಾತ್ಮಕವಾದ ಅವ್ಯಕ್ತ[1] ವಿಧಾನದಲ್ಲಿ ದಾಟಿಸಲ್ಪಡುತ್ತಿದ್ದ ಜ್ಞಾನದ ಪ್ರಕಾರಗಳು ಈಗ ಉಳಿವಿಗಾಗಿ  ವ್ಯಕ್ತ ಅಥವಾ ಮಾಹಿತಿ ನೀಡುವಂತಹ ಸ್ವರೂಪವನ್ನು ಅಳವಡಿಸಿಕೊಳ್ಳುವ ಹಾಗಾಗಿದೆ. ಎಳೆಯರನ್ನು ಬದುಕಿಗೆ ಸಾಮಾಜೀಕರಣಗೊಳಿಸುವ ಅವಕಾಶವನ್ನು ಈಗ ಎಲ್ಲವನ್ನೂ ದಾಖಲಿಸುವ ಒಂದು ಹತಾಶ ಪ್ರಯತ್ನವನ್ನಾಗಿ ಪರಿವರ್ತಿಸಲಾಗಿದೆ; ಸಾಮುದಾಯಿಕ ಬದುಕು ಪರಕೀಯ ಸಾಂಕೇತಿಕ ರೂಪಗಳು (alien symbolic forms) ಮತ್ತು ಮೌಲ್ಯಗಳಿಗೆ ಶರಣಾಗುವ ಅಥವಾ ಅವುಗಳಿಂದ ದಾಳಿಗೊಳಗಾಗುವ ಒಂದಲ್ಲ ಒಂದು ಅಪಾಯಕ್ಕೆ ಸಿಲುಕುತ್ತಲೇ ಇದೆ.

ಅನುಭವಾತ್ಮಕದಿಂದ ಪುಸ್ತಕ ಜ್ಞಾನಕ್ಕೆ ಆದ ಸಾಂಸ್ಕೃತಿಕ ಜ್ಞಾನದ ರೂಪಾಂತರದಲ್ಲಿ ಮಗು ಮತ್ತು ಸಂಸ್ಕೃತಿಯ ನಡುವಿನ ಅಂತರ್‌ಕ್ರಿಯೆ ನಡೆಯುವ ಬಿಂದುವಿನಲ್ಲಿ ಒಂದು ಬಗೆಯ ಒರಟುತನವುಂಟಾತ್ತದೆ. ಸಂಸ್ಕೃತಿಯ ಪ್ರತಿಯೊಂದೂ ಚಿಕ್ಕ ಅಂಶವನ್ನು ವ್ಯಕ್ತಗೊಳಿಸಿ ಮಕ್ಕಳಿಗೆ ದಾಟಿಸಬೇಕಾದಾಗ ಆ

---

[1] tacit knowledge: ಅನುಭವಾತ್ಮಕವಾದದ್ದು, ಮಾಡಿ ಕಲಿಯುವಂಥದ್ದು. explicit knowledge: ತಾರ್ಕಿಕ, ದಾಖಲಿಸಲು ಮತ್ತು ದಾಟಿಸಲು ಬರುವಂಥದ್ದು, ಉದಾಹರಣೆಗೆ ಪುಸ್ತಕ ಜ್ಞಾನ.

ಅಂಶಗಳನ್ನು ಪ್ರಜ್ಞಾಪೂರ್ವಕವಾಗಿ ಒಂದಲ್ಲ ಒಂದು ಮಾಧ್ಯಮದ ಮೂಲಕ ದಾಖಲಿಸಬೇಕಾಗುತ್ತದೆ. ಆಗ ವಯಸ್ಕ ಮತ್ತು ಮಗುವಿನ ಸಂಬಂಧದಲ್ಲಿ ಅತಿಮುಖ್ಯವಾದ ಏನೋ ನಾಶವಾಗುತ್ತದೆ. ಅದು ಕೆಲವೊಮ್ಮೆ ಮಗುವಿನೊಂದಿಗೆ ವ್ಯವಹರಿಸುವಾಗ ವಯಸ್ಕರು ಸೂಕ್ಷ್ಮತೆಯನ್ನು ಕಳೆದುಕೊಳ್ಳುವ ರೂಪದಲ್ಲಿ, ಮತ್ತೂ ಕೆಲವೊಮ್ಮೆ, ವಯಸ್ಕರು ತಮ್ಮ ಅಧಿಕಾರವನ್ನು (ಹಿಡಿತ) ಕಳೆದುಕೊಳ್ಳುವ ರೂಪದಲ್ಲಿ ಪ್ರಕಟಗೊಳ್ಳುತ್ತದೆ. ಹೊಸ ಆಂಕರ್‌ಗಳು, ಜಾಕೀಗಳು ಮತ್ತು ಸ್ಟಾರ್‌ಗಳ ಒಂದು ಅಗಾಧವಾದ, ವೈವಿಧ್ಯಮಯವಾದ ಸೈನ್ಯದ ವಿರುದ್ಧ ಜಾಗತಿಕ ಮಾಧ್ಯಮಗಳು (global media) ವಯಸ್ಕರನ್ನು ಪಾಲಕರಂತೆ ಪರ್ಯಾಯವಾಗಿ ನಿಲ್ಲಿಸುವ ಮೂಲಕ ಮತ್ತು ಈಗಾಗಲೇ ಸಮುದಾಯದಿಂದ ಬೇರ್ಪಟ್ಟ ವಿಭಕ್ತ ಕುಟುಂಬದ ವಯಸ್ಕ ಮತ್ತು ಮಗುವಿನ ಸಂಬಂಧದ ಮೇಲೆ ದಾಳಿ ಮಾಡುತ್ತವೆ, ಅದು ಕೊನೆ ಪಕ್ಷ ಭಾವದಲ್ಲಾದರೂ ಆ ಸಮುದಾಯದ ಭಾಗವಾಗಿತ್ತು. ಸಮುದಾಯದ ನೆನಪುಗಳನ್ನು ಎಳೆಯರಿಗೆ ದಾಟಿಸುವ ಪ್ರಕ್ರಿಯೆಯೂ ಸುಗಮವಿಲ್ಲ. ಕೆಲವು ಪ್ರಕರಣಗಳಲ್ಲಿ ಎಷ್ಟು ತೀವ್ರವಾದ ಅಡಚಣೆ ಉಂಟಾಗುತ್ತದೆಯೆಂದರೆ, ಸಾಂಸ್ಕೃತಿಕ ಆದರ್ಶಗಳಿಗೆ ಪ್ರೇರಣೆಯನ್ನು ಸೃಷ್ಟಿಸುವ ಹಾದಿಯಾಗಬೇಕಿದ್ದ ಅಸ್ಮಿತೆಯು ತಾನೇ ಅಂತಿಮ ಗುರಿಯಾಗಿಬಿಡುತ್ತದೆ. ಅಸ್ಮಿತೆ, ಪವಿತ್ರ ಗ್ರಂಥಗಳ ವ್ಯಾಖ್ಯಾನ, ರಾಜಕೀಯದಲ್ಲಿ ಧರ್ಮದ ಪಾತ್ರಗಳನ್ನು ಕುರಿತ ಸಂಘರ್ಷಗಳಿಗೆ ಕೆಲವು ಸನ್ನಿವೇಶಗಳು ಅಖಾಡಾಗಳಾಗಿ ಪರಿವರ್ತಿತವಾಗುತ್ತವೆ. ಜಾಗತೀಕರಣವು ಶಬ್ದಶಃ ಅರ್ಥದಲ್ಲಿ ಪ್ರಜ್ಞೆಯನ್ನು ವಿಸ್ತರಿಸಬೇಕು. ಅದರ ಸೂಚ್ಯಾರ್ಥದಲ್ಲಿ ಅಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪ್ರಜ್ಞೆಯ ಸ್ಥಳೀಕರಣವಾಗುತ್ತದೆ. ಅದು ಸಾಂಸ್ಥೀಕರಣಗೊಂಡ ಜಾಗತಿಕ ಅಧಿಕಾರದಿಂದ ಮಾತನಾಡುವ ಮತ್ತು ಕೆಲಸ ಮಾಡುವ ಶಕ್ತಿಗಳಿಗೆ ಉಳಿದ ಸಮುದಾಯಗಳು ನೀಡುವ ಪ್ರತಿಕ್ರಿಯೆಯ ಪರಿಣಾಮವಾಗಿ, ಮತ್ತು, ಭಾಗಶಃ, ಅಸ್ಮಿತೆಯನ್ನು ಕಳೆದುಕೊಳ್ಳುವ ಭಯದಿಂದ ಹುಟ್ಟುವ ಅನಿಶ್ಚಿತತೆ ಮತ್ತು ಗೊಂದಲಕ್ಕೆ ನೀಡುವ ಪ್ರತಿಕ್ರಿಯೆಯ ಪರಿಣಾಮವಾಗಿ ಪ್ರಜ್ಞೆಯ ಸ್ಥಳೀಕರಣವಾಗುತ್ತದೆ. ತಂತ್ರಜ್ಞಾನದ ಮತ್ತು ಆರ್ಥಿಕ ಪ್ರಕ್ರಿಯೆಗಳ ಪರಿಣಾಮವಾಗಿ ವೃತ್ತಿಸಂಬಂಧಿತ ಅಸ್ಮಿತೆಗಳೂ ಸಹ ನಶಿಸತೊಡಗುತ್ತವೆ, ಇಲ್ಲಿ ಕೂಡಾ ಅಸ್ಮಿತೆಗಳನ್ನು ವ್ಯಾಖ್ಯಾನಿಸುವ ಪಾತ್ರವು ಧರ್ಮದ್ದಾಗಿರುತ್ತದೆ [ಹೂವ್ಸ್, 2006].

**ಮೂಲಭೂತವಾದದ ಪರಿಣಾಮ**

ಈ ಬೆಳವಣಿಗೆಯ ಒಂದು ಪ್ರಕಟಿತ ರೂಪವೇ ಮೂಲಭೂತವಾದವಾಗಿದೆ. ಇಂದು ಜಗತ್ತಿನಾದ್ಯಂತ ತೀರಾ ಹಿಂದುಳಿದ ಮತ್ತು ಅನಕ್ಷರಸ್ಥ ಎಂದು ಕರೆಯಲ್ಪಡುವ ಸಮಾಜಗಳಲ್ಲಿ ಮಾತ್ರವಲ್ಲ, ಬಹಳ ಮುಂದುವರೆದ ಸಮಾಜಗಳಲ್ಲಿಯೂ ಅದು ಅನೇಕ ವಿಭಿನ್ನ ಸಂದರ್ಭಗಳಲ್ಲಿ ವೃದ್ಧಿಸುತ್ತಿದೆ [ಮಾರ್ಟಿ ಮತ್ತು ಆಪಲ್‌ಬಿ, 1993]. ಒಂದು ಚಿಂತನೆಯಾಗಿ ಮೂಲಭೂತವಾದವು ಕಾರ್ಯನಿರ್ವಹಿಸುವ ಬಗೆಗೂ, ವಯಸ್ಕ ಮತ್ತು ಮಗುವಿನ ನಡುವೆ ನಡೆಯುವ ಸಾಂಸ್ಕೃತಿಕ ಪ್ರಸರಣಕ್ಕೂ (cultural transmission) ಸಂಬಂಧವಿದೆ. ಎರಡರಲ್ಲಿಯೂ ಅತಿಯಾದ ನಿಶ್ಚಿತತೆ ಮತ್ತು ಸ್ಪಷ್ಟತೆ ಕಾಣುತ್ತದೆ, ಒಂದು ಬಗೆಯ ಅಂತಿಮ ಅಳಿವಿನ ಭಾವವನ್ನು ಕುರಿತು ಎರಡೂ ಪ್ರಸರಣಗಳ ನೋಟವಿರುತ್ತದೆ. ಮಕ್ಕಳಿಗೆ ತಮ್ಮ ಸಂಸ್ಕೃತಿಯ ಮಹತ್ವದ ಮೌಲ್ಯಗಳು ಮತ್ತು ಕಟ್ಟಳೆಗಳನ್ನು ಎಷ್ಟು ಸಾಧ್ಯವೋ ಅಷ್ಟು ಮುಂಚಿತವಾಗಿ ದಾಟಿಸುವ ಅವಶ್ಯಕತೆಯ ಹಾಗೂ, ಸ್ಪಷ್ಟವಾದ ಮತ್ತು ನಿರ್ದಿಷ್ಟವಾದ ವಿಧಾನಗಳಲ್ಲಿ ಮಕ್ಕಳನ್ನು ಸಾಮಾಜೀಕರಣಗೊಳಿಸುವ ನಿಟ್ಟಿನ ಪಾಲಕರ ತರಾತುರಿಯ ಹಿಂದೆ ಭಯವಿದೆ; ಸ್ವಲ್ಪ ವಿಳಂಬವಾದರೂ ತಮ್ಮ ಮಗುವು ದಾರಿ ತಪ್ಪಿದ ಜಗತ್ತಿನಲ್ಲಿ ತುಂಬಾ ದೂರ ಸಾಗಿಬಿಡಬಹುದು ಎಂಬ ಭಯ. ಆದ್ದರಿಂದ ತಮ್ಮ ಮಗುವು ಜಾಗತಿಕ ಕತ್ತಲೆಯಲ್ಲಿ ಕಳೆದುಹೋಗುವ ಮೊದಲೇ ಅವನ/ಅವಳ ಮನಸ್ಸಿನಲ್ಲಿ ತಾವು ದಾಟಿಸಬೇಕಾದ್ದನ್ನು ಅಚ್ಚೊತ್ತುವ ಯತ್ನವನ್ನು ಪಾಲಕರು ಮಾಡುತ್ತಾರೆ. ಸಂಸ್ಕೃತಿ ಮತ್ತು ಧರ್ಮದೆಡೆಗಿನ ಮೂಲಭೂತವಾದಿಯ ಸಮೀಪಗಮನದಲ್ಲಿಯೂ ಇದೇ ಭಯವು ಕಂಡುಬರುತ್ತದೆ. ಈ ಹಾದಿಯು ಒಳಿತು

ಮತ್ತು ಕೆಡುಕಿನ ನಡುವಿನ ಅಂತಿಮ ಕದನದ ರೂಪಕದಿಂದ ಪ್ರೇರಿತವಾಗಿದೆ. ಬೆಂಬಲ ಮತ್ತು ಸಿಂಧುತ್ವವನ್ನು ಪಡೆಯಲು ಅಮೆರಿಕದಲ್ಲಿ ಕಾಣುವಂತೆ ಪ್ರಭುತ್ವದ ಚಿಂತನೆಗಳಾಗಿ ಅಥವಾ ಹಿಂಸೆ ಮತ್ತು ಭಯವನ್ನು ಹುಟ್ಟಿಸುವ ಸಂಸ್ಥೆಗಳ ಚಿಂತನೆಗಳಾಗಿ ಈ ಮೂಲಭೂತವಾದಿ ಚಿಂತನೆಗಳು ನಡೆಸುವ ಸಾಮಾಜಿಕ ನಾಟಕದಲ್ಲಿ ಸಾವಿನ ರೂಪಕಗಳನ್ನು ಹೆಚ್ಚಾಗಿ ಕಾಣಬಹುದು. ಶಿಕ್ಷಣದ ಗುರಿ ಒಂದು ಬದ್ಧತೆಯುಳ್ಳ, ಸ್ಪಷ್ಟ ರೂಪದಲ್ಲಿ ಅಭಿವ್ಯಕ್ತಿಸುವಂತಹ ಅಸ್ಮಿತೆಯನ್ನು ಹೊಂದುವುದಾಗಿದೆ ಎಂಬ ವಿಚಾರವು ಮೂಲಭೂತವಾದಿ ಚಿಂತನೆಗಳಿಗೆ ಒಪ್ಪಿತವಾಗುತ್ತದೆ, ಅವರ ಪ್ರಕಾರ ಎಳೆಯರಿಗೆ ನೀಡುವ ಶಿಕ್ಷಣವು ಒಂದು ನಿರ್ಣಾಯಕ ಸಂಗತಿಯಾಗಿದೆ ಮತ್ತು ಭವಿಷ್ಯದ ದೃಷ್ಟಿಯಿಂದ ಒಳಿತನ್ನು ಮಾಡುವಂಥದ್ದು. ಶಿಕ್ಷಣ ವ್ಯವಸ್ಥೆಗಳು ಸಾಮೂಹಿಕ ಅಸ್ಮಿತೆಯನ್ನು ಕ್ರೋಢೀಕರಿಸುವ ಒಂದು ಶಕ್ತಿಯಾಗಿ ಕೆಲಸ ಮಾಡಬೇಕು ಎಂಬ ಬೇಡಿಕೆಗೆ ಅನೇಕ ದೇಶಗಳಲ್ಲಿ ಸ್ಪಂದನೆ ಸಿಗುತ್ತಿದೆ.

ಶಿಕ್ಷಣವು ಯಾವ ಬಗೆಯ ಅಸ್ಮಿತೆಯನ್ನು ಉತ್ತೇಜಿಸಬೇಕು ಮತ್ತು ಬೇರೆ ಬೇರೆ ಸಾಮುದಾಯಿಕ ಹಿತಾಸಕ್ತಿಗಳನ್ನು ಹೇಗೆ ಒಳಗೊಳ್ಳಬೇಕು ಎಂಬುದನ್ನು ಕುರಿತು ಹಲವು ಸಮಾಜಗಳಲ್ಲಿ ದೊಡ್ಡ ಪ್ರಮಾಣದ ವಾದವಿವಾದಗಳು ನಡೆಯುತ್ತಿವೆ. ಮುಂದುವರೆದ ಮತ್ತು ಮುಂದುವರೆಯುತ್ತಿರುವ-ಎರಡೂ ದೇಶಗಳ ಅರ್ಥ ವ್ಯವಸ್ಥೆಯಲ್ಲಿ ಆದ ಜಾಗತೀಕರಣದ ಅಭಿವೃದ್ಧಿಗಳು ಅಸ್ಮಿತೆಯ ಪಾತ್ರವನ್ನು ಹಿರಿದಾಗಿಸಿವೆ, ಅದರ ಪರಿಣಾಮವಾಗಿ ಪದೇ ಪದೇ ವ್ಯಾಜ್ಯಗಳು ಮತ್ತು ಶಸ್ತ್ರಸಜ್ಜಿತ ಸಂಘರ್ಷಗಳು/ಯುದ್ಧಗಳು ತಲೆಯೆತ್ತುತ್ತಿವೆ. ಅಸ್ಮಿತೆಯ ಸಂಘರ್ಷದಲ್ಲಿ ಮಕ್ಕಳು ಸದಾ ಅಂಚಿನವರು, ಆದರೆ ಅಸ್ಮಿತೆಯ ರಾಜಕಾರಣದಲ್ಲಿ ಶಿಕ್ಷಣಕ್ಕೆ ಇರುವ ಪ್ರಾಮುಖ್ಯತೆಯನ್ನು ಪರಿಗಣಿಸಿದರೆ, ಅಸ್ಮಿತೆಯ ಸಂಘರ್ಷಗಳಿಂದ ಉದ್ಭವಿಸಿದ ಸಾಂಕೇತಿಕ ಅಥವಾ ನೈಜ ಹೋರಾಟಗಳಲ್ಲಿ ಬಾಲ್ಯದ ಮಹತ್ವವನ್ನು ನಾವು ಅರಿಯಬಹುದು.

ಜನಾಂಗೀಯ ಅಥವಾ ಉಪ-ರಾಷ್ಟ್ರೀಯ ಅಸ್ಮಿತೆಗಳು ಶಸ್ತ್ರಸಜ್ಜಿತ ಹೋರಾಟಗಳಾಗಿ ತೀವ್ರ ಸ್ವರೂಪವನ್ನು ಪಡೆದ ದೇಶಗಳಲ್ಲಿ ಯುದ್ಧಕ್ಕೆ ಮಕ್ಕಳೂ ನೇಮಿಸಲ್ಪಡುತ್ತಾರೆ, ಶಸ್ತ್ರಗಳನ್ನು ಹೇಗೆ ಬಳಸುವುದು ಎನ್ನುವುದೇ ಅವರ ಶಿಕ್ಷಣವಾಗಿ ಪರಿಣಮಿಸುತ್ತದೆ. ಬುರುಂಡಿ, ಡೆಮಾಕ್ರೆಟಿಕ್ ರಿಪಬ್ಲಿಕ್ ಆಫ್ ಕಾಂಗೊ, ಶ್ರೀಲಂಕಾದಂತಹ ದೇಶಗಳಲ್ಲಿ ಶಸ್ತ್ರಸಜ್ಜಿತ ಸೈನಿಕರ ಪಾತ್ರವನ್ನು ಹೇರುವ ತಂಡದೊಂದಿಗೆ ಸಕ್ರಿಯವಾಗಿ ಮೈತ್ರಿಪೂರ್ಣ ಸಂಬಂಧವನ್ನು ಹೊಂದುವಂತೆ ಮಕ್ಕಳಿಗೆ ಉಪದೇಶಿಸಲಾಗುತ್ತದೆ. ನೈಸರ್ಗಿಕ ಸಂಪನ್ಮೂಲಗಳಿಂದ ಬಂದ ಆದಾಯವನ್ನು ಅಸ್ತ್ರಗಳನ್ನು ಕೊಳ್ಳಲು ಬಳಸಲಾಗುತ್ತದೆ, ಪ್ರಭುತ್ವಗಳನ್ನೂ ಒಳಗೊಂಡು ಶಸ್ತ್ರಸಜ್ಜಿತ ಹೋರಾಟದಲ್ಲಿ ನಿರತರಾದ ಎರಡೂ ಪಕ್ಷಗಳಲ್ಲಿ ಇದು ನಡೆಯುತ್ತದೆ. ಅಂತಹ ಎಲ್ಲಾ ಸಂದರ್ಭಗಳಲ್ಲಿಯೂ, ಮುಂದುವರೆದ ರಾಷ್ಟ್ರಗಳಿಂದ ಶಸ್ತ್ರಾಸ್ತ್ರಗಳನ್ನು ಕೊಳ್ಳುವ ಪ್ರಭುತ್ವಗಳು ಮುಂದುವರೆದ ರಾಷ್ಟ್ರಗಳ ಋಣದಲ್ಲಿ ಬಿದ್ದು ಅಂತರರಾಷ್ಟ್ರೀಯ ಹಣಕಾಸು ನಿಧಿಯ (IMF) ಮಾರ್ಗದರ್ಶನದಂತೆ ತಮ್ಮ ಅರ್ಥವ್ಯವಸ್ಥೆಯಲ್ಲಿ ರಚನಾತ್ಮಕ ಹೊಂದಾಣಿಕೆಯನ್ನು (structural adjustment) ಮಾಡಿಕೊಳ್ಳುವ ಅನಿವಾರ್ಯತೆಗೆ ಸಿಲುಕುತ್ತವೆ. ಹೀಗಾಗಿ, ಪ್ರಭುತ್ವವು ದುರ್ಬಲಗೊಳ್ಳುವ ಪ್ರಕ್ರಿಯೆಯು ನಿರಂತರವಾಗಿರುತ್ತದೆ. ಜಾಗತೀಕರಣವನ್ನು ನಿಭಾಯಿಸಲು ಅಂತರರಾಷ್ಟ್ರೀಯ ಹಣಕಾಸು ನಿಧಿಯ ಮಾರ್ಗದರ್ಶನವು ಸಾಮರ್ಥ್ಯ ಬೆಳೆಸುವ ಮಾರ್ಗವೆಂದು ಬಿಂಬಿಸಲಾಗುತ್ತದೆ.

ಸಾಲದ ಹೊರೆ ಹೊತ್ತ ಆಫ್ರಿಕಾದ ರಾಷ್ಟ್ರಗಳ ಮೇಲೆ ಆಗಿರುವ ರಚನಾತ್ಮಕ ಹೊಂದಾಣಿಕೆಯ ಕಾರ್ಯಕ್ರಮದ (structural adjustment programme) ಪರಿಣಾಮವನ್ನು ಕುರಿತು ಯೂನಿಸೆಫ್‌ನ ವಿಶ್ವದ ಮಕ್ಕಳ ಸ್ಥಿತಿಯ ವರದಿಯು (State of the World's children, 1989) ಬೆಳಕು ಚೆಲ್ಲುತ್ತದೆ. ಇತ್ತೀಚಿನ ವರ್ಷಗಳಲ್ಲಿ ಮಕ್ಕಳ ಸ್ಥಿತಿಯು ಈ ವರದಿಯಲ್ಲಿ ವರ್ಣಿಸಿರುವುದದಕ್ಕಿಂತ ಹೆಚ್ಚು ಹಾಳಾಗಿದೆ, ಅದರ ಪರಿಣಾಮವಾಗಿ ಹಿಂಸಾತ್ಮಕ ಸಂಘರ್ಷಗಳು ಇನ್ನಷ್ಟು ಉಲ್ಬಣಗೊಂಡು, ಅದರಲ್ಲಿ ಈಗ ನೇರವಾಗಿಯೇ

ಮಕ್ಕಳನ್ನು ಸೈನಿಕರಾಗಿ ಸೇರಿಸಿಕೊಳ್ಳಲಾಗುತ್ತಿದೆ. ಅದರ ಜೊತೆಗೆ ಜಗತ್ತಿನ ಇತರ ಭಾಗಗಳಲ್ಲಿ ಆಂತರಿಕ ಸಂಘರ್ಷ, ರಾಜಕೀಯದ ಅಥವಾ ಜನಾಂಗೀಯ ತಿಕ್ಕಾಟದ ಕದನಗಳಲ್ಲಿ ಮಕ್ಕಳನ್ನು ಬಳಸಲಾಗುತ್ತಿದೆ. ಉದಾಹರಣೆಗೆ ಶ್ರೀಲಂಕಾ ಅಥವಾ ನೇಪಾಳದಂತಹ ದೇಶಗಳ ಸಂಘರ್ಷಗಳಲ್ಲಿ ಬಳಸಲಾಗುತ್ತಿರುವ ಅಸ್ತ್ರಗಳು ಜಾಗತಿಕ ಶಸ್ತ್ರಾಸ್ತ್ರ ವ್ಯಾಪಾರದ ಮೂಲಕ ಮಕ್ಕಳ ಕೈಗೆ ತಲುಪುತ್ತಿವೆ. ಈ ವ್ಯಾಪಾರವು ಹೇಗೆ ಬೆಳೆದಿದೆಯೆಂದರೆ, ಈಗ ಅದು ರಾಷ್ಟ್ರೀಯ ಗಡಿಗಳಲ್ಲಿ ತೋರುವ ಮೃದು ಧೋರಣೆ ಮತ್ತು ಕಾರ್ಪೊರೇಟ್ ಶಕ್ತಿಯ ನೇರ ಪರಿಣಾಮದಿಂದಾಗಿ ಜಗತ್ತಿನ ಯಾವುದೇ ಮೂಲೆಯನ್ನೂ ತಲುಪಬಲ್ಲ ಸಾಮರ್ಥ್ಯವನ್ನು ಹೊಂದಿದೆ.

**ಅಂತರ್ಗತ ಪರಿಣಾಮಗಳು**

ಬಾಲ್ಯದ ಮೇಲೆ ಜಾಗತೀಕರಣದ ಇನ್ನೂ ಅನೇಕ ಅಪ್ರತ್ಯಕ್ಷ ಪರಿಣಾಮಗಳು ಆಗುತ್ತಿವೆ. ಅಧ್ಯಯನಕ್ಕೆ ಇವು ನಾವು ಮೇಲೆ ಚರ್ಚಿಸಿದ ಪರಿಣಾಮಗಳಿಗಿಂತ ಹೆಚ್ಚು ಸಂಕೀರ್ಣವೂ, ಕಷ್ಟಕರವೂ ಆಗಿವೆ. ಇವು ಮುಂದುವರೆದ ಹಾಗೂ ಮುಂದುವರೆಯುತ್ತಿರುವ ಹಲವಾರು ದೇಶಗಳ ಜಾಗತೀಕರಣದ ನಿಟ್ಟಿನ ಆರ್ಥಿಕ ನೀತಿಗಳು ಕೆಲಸದ ಮಾದರಿಗಳು ಮತ್ತು ಔದ್ಯೋಗಿಕ ಅವಕಾಶಗಳು, ಹಾಗೂ ಕೃಷಿ ಮತ್ತು ಉತ್ಪಾದನೆಯ ಇತರ ಪ್ರಾಥಮಿಕ ರೂಪಗಳಲ್ಲಿ ತಂದ ಬದಲಾವಣೆಗಳಿಗೆ ಸಂಬಂಧಿಸಿವೆ. ಸೇವಾ ವೃತ್ತಿಗಳ ಒಂದು ದೊಡ್ಡ ಘಟಕವನ್ನೇ ದೂರದ ಪ್ರದೇಶಗಳಿಗೆ ಸ್ಥಳಾಂತರಿಸಿ, ಉತ್ಪಾದನೆಯ ವಿವಿಧ ಹಂತಗಳನ್ನು ಜಗತ್ತಿನಾದ್ಯಂತ ವಿವಿಧ ಸ್ಥಳಗಳಲ್ಲಿ ಹರಡಿಕೊಳ್ಳುವಂತೆ ಮಾಡುವ ಮೂಲಕ ಈ ಬದಲಾವಣೆಗಳು ಬಹುಮಟ್ಟಿಗೆ ಕಣ್ಣಿಗೆ ಕಾಣತೊಡಗಿದ್ದು ಬಹುರಾಷ್ಟ್ರೀಯ ಕಂಪೆನಿಗಳ ಸಾಧನೆಯಾಗಿದೆ, ಅದೂ ಅತೀ ಕಡಿಮೆ ಸಮಯದಲ್ಲಿ. ಇದಕ್ಕೆ ಹೋಲಿಸಿದಾಗ, ಕುಟುಂಬಗಳ ಮೇಲೆ ಕೆಲಸದ ಮಾದರಿಗಳಲ್ಲಾದ ಈ ಹೊಸ ಬದಲಾವಣೆಗಳ ಪರಿಣಾಮವು ಅಲ್ಪ ಪ್ರಮಾಣದಲ್ಲಿ ಗೋಚರಿಸಿದೆ. ಅಂತಹ ಪರಿಣಾಮಗಳನ್ನು ಕುರಿತು ಅಧ್ಯಯನ ಮಾಡಿರುವ ಕೆಲವೇ ಸಂಶೋಧಕರಲ್ಲಿ ಹೂಪ್ಸ್ (2003) ಒಬ್ಬರು. ಕುಟುಂಬ, ಮಕ್ಕಳ ಆರೈಕೆ ಮತ್ತು ಪೋಷಣೆ ಹಾಗೂ ಸಾಮಾಜೀಕರಣದ ಪ್ರಕ್ರಿಯೆಗಳಲ್ಲಿ ಸಂಬಂಧಗಳ ಮೂಲಭೂತ ಸ್ವರೂಪದಲ್ಲಿಯೇ ಬದಲಾವಣೆಗಳನ್ನು ಕಾಣಬಹುದು ಎಂಬುದನ್ನು ಆಕೆಯ ಅಧ್ಯಯನಗಳು ತೋರಿಸಿಕೊಡುತ್ತವೆ. ಕೆಲಸಕ್ಕೆ ಸಂಬಂಧಿಸಿದ ಬದಲಾವಣೆಗಳ ಹಿನ್ನೆಲೆಯಲ್ಲಿ ಆಗುವ ಮೌಲ್ಯ-ಪಲ್ಲಟಗಳ ಸ್ವರೂಪದ ಬಗೆಗೂ ಆಕೆಯ ಅಧ್ಯಯನವು ಬೆಳಕು ಚೆಲ್ಲುತ್ತದೆ. ಈ ಅನ್ವೇಷಣೆಯ ಎಳೆಯನ್ನು ಕೃಷಿಯತ್ತಲೂ ತೆಗೆದುಕೊಂಡು ಹೋಗಿ ಗ್ರಾಮೀಣ ಪ್ರದೇಶಗಳಲ್ಲಿ ಆಗುತ್ತಿರುವ ಬದಲಾವಣೆಗಳನ್ನೂ ವಿಶ್ಲೇಷಿಸೋಣ. ಕೃಷಿಗೆ ಸಂಬಂಧಿಸಿದ ವಾಣಿಜ್ಯ ಕಂಪೆನಿಗಳು ಜೈವಿಕ ತಂತ್ರಜ್ಞಾನದಲ್ಲಾದ ಅಭಿವೃದ್ಧಿಗಳನ್ನು ಬಳಸಿಕೊಳ್ಳುತ್ತವೆ, ಇದು ಬಹುಪಾಲು ರೈತರನ್ನು ಆರ್ಥಿಕವಾಗಿ ಅಸಹಾಯಕರನ್ನಾಗಿ ಮಾಡುತ್ತಿದೆ. ಕಳೆದ ಕೆಲವು ದಶಕಗಳಲ್ಲಿ ಅನೇಕ ಆಫ್ರಿಕನ್ ಮತ್ತು ಲ್ಯಾಟಿನ್ ಅಮೇರಿಕಾದ ಸಮಾಜಗಳಲ್ಲಿ ಅಲ್ಲಿಯ ರೈತರಿಗೆ ಜೀವನಾಧಾರವಾಗಿರುವ ಅನೇಕ ವಾಣಿಜ್ಯ ಬೆಳೆಗಳ ಬೇಡಿಕೆಯು ಏರಿಳಿತಗಳನ್ನು ಕಂಡು, ಅದರ ಆಘಾತಕಾರಿ ಪರಿಣಾಮವನ್ನು ಅವರು ಅನುಭವಿಸಿದರು. ತಳೀಯವಾಗಿ ಮಾರ್ಪಡಿಸಿದ ಬೀಜಗಳ ಪ್ರವೇಶದೊಂದಿಗೆ ರೈತ ಸಮುದಾಯದ ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಲಿದೆ. ಭಾರತದಲ್ಲಿ ಈಗಾಗಲೇ ತಳೀಯವಾಗಿ ಮಾರ್ಪಡಿಸಿದ ಹತ್ತಿಯ ಕೃಷಿಯಲ್ಲಿ ಆದ ಖರ್ಚನ್ನು ನಿಭಾಯಿಸಲಾಗದೇ ಮಾಡಿದ ಸಾಲದ ಹೊರೆಯಿಂದ ತತ್ತರಿಸಿ 40,000 ಕ್ಕಿಂತಲೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ [ದಾಂಡೇಕರ್ ಮತ್ತಿತರರು, 2005].

ಕುಟುಂಬದಂತಹ ಸಾಮಾಜಿಕ ಸಂಸ್ಥೆಗಳಲ್ಲಿ ಹೀಗೆ ಹಿಂದೆಂದೂ ಕಾಣದ ರೀತಿಯಲ್ಲಿ ನಡೆಯುವ ಸಾಮಾಜಿಕ ವಿದ್ಯಮಾನಗಳನ್ನು ಕುರಿತ ಅಧ್ಯಯನವು ಇನ್ನೂ ಆರಂಭವಾಗಿಲ್ಲ. ನಗರಗಳಿಗೆ ಆಗುತ್ತಿರುವ

ವಲಸೆಯು ಇನ್ನೂ ವೇಗವಾಗಿ ಸಾಗುತ್ತದೆ ಮತ್ತು ಶಿಕ್ಷಣ ವ್ಯವಸ್ಥೆಯಲ್ಲಿ ಹಸಿವು ಮತ್ತು ಅಸಮಾನತೆಯನ್ನು ನಿಭಾಯಿಸುವ ಸಾಮರ್ಥ್ಯವು ಮಾತ್ರ ಊಹಿಸಲು ಸಾಧ್ಯವಿಲ್ಲದ ಪ್ರಮಾಣದಲ್ಲಿ ಸವಾಲುಗಳನ್ನು ಎದುರಿಸಬೇಕಾಗುತ್ತದೆ ಎನ್ನುವುದನ್ನು ಮಾತ್ರ ವಿದ್ವಾಂಸರು ಖಚಿತವಾಗಿ ಹೇಳುತ್ತಾರೆ. ಮುಂದುವರೆದ ರಾಷ್ಟ್ರಗಳಲ್ಲಿ ಕೃಷಿ-ಆರ್ಥಿಕ ಸ್ಥಿತಿ ಮತ್ತು ನೈಸರ್ಗಿಕ ವಾಸಸ್ಥಳಗಳ ವಿನಾಶದಿಂದ ಉಂಟಾಗುವ ಒತ್ತಡವು ದಿನದಿಂದ ದಿನಕ್ಕೆ ಹೆಚ್ಚಾಗುವುದನ್ನು ನಿರೀಕ್ಷಿಸಬಹುದು. ಅದು ಈಗಾಗಲೇ ವಲಸಿಗರ ಕಾರಣದಿಂದ ಆಗುತ್ತಿದೆ. ಅವರ ಶಿಕ್ಷಣ ವ್ಯವಸ್ಥೆಗಳು ಹೇಗೆ ನಿಭಾಯಿಸಬಲ್ಲವು ಎಂಬುದು ವಿಸ್ತೃತ ವ್ಯಾಪ್ತಿಯ ಸಾಂಸ್ಕೃತಿಕ ಹಿನ್ನೆಲೆಗಳಿಂದ ಬರುವ ಮಕ್ಕಳು, ಶಿಕ್ಷಕರ ಅಭಾವ, ಮ್ಯಾನೇಜ್‌ಮೆಂಟ್ ಸಂಸ್ಕೃತಿಯ ಒತ್ತಡದೊಳಗೆ ಬೋಧನಾ ವೃತ್ತಿಯಲ್ಲಾದ ಬದಲಾವಣೆಗಳು, ಹೀಗೆ ಈ ಎಲ್ಲದರ ಉಪಸ್ಥಿತಿಯಲ್ಲಿ ಪರೀಕ್ಷೆಗೊಳಗಾಗುತ್ತದೆ. ಹೆಚ್ಚಿನ ತೃತೀಯ ಜಗತ್ತಿನ ದೇಶಗಳಲ್ಲಿ ತೀವ್ರ ಸೈದ್ಧಾಂತಿಕ ಒತ್ತಡಗಳಿಗೆ ಮಣಿದು ಸರಕಾರವು ಮಗುವಿನ ಆರೈಕೆ ಮತ್ತು ಶಿಕ್ಷಣದಂತಹ ಕಲ್ಯಾಣ ಕಾರ್ಯಕ್ರಮಗಳನ್ನು ಹಿಂತೆಗೆದುಕೊಂಡಿದೆ. ಈ ಎಲ್ಲ ಬೆಳವಣಿಗೆಗಳ ಒಂದು ಪರಿಣಾಮವೆಂದರೆ ಖಾಸಗೀಕರಣ, ಇನ್ನೊಂದು ಪರಿಣಾಮವೆಂದರೆ ನ್ಯೂವೆನ್ಯೂಯ (1998) ಹೇಳುವ ಹಾಗೆ ಸರಕಾರೇತರ ಸಂಸ್ಥೆಗಳ ಮೂಲಕ ನಡೆಯುವ ಜಾಗತಿಕ ಔದಾರ್ಯದ/ದಾನಧರ್ಮದ ಮಾರುಕಟ್ಟೆಯ (global charity market) ಉದಯ. ಈ ಬೆಳವಣಿಗೆಗಳು ಸೂಚಿಸುವ ಹಾಗೆ ಯುರೋಪಿನ ಬೂರ್ಜ್ವಾ ಬಾಲ್ಯದ ಮಾನದಂಡಗಳು ಹಿಂದೆ ವಸಾಹತುಗಳಾಗಿದ್ದ ದೇಶಗಳಲ್ಲಿ ಹರಡಿಕೊಂಡು ಅಲ್ಲಿ ಕೇವಲ ಭ್ರಮೆಗಳನ್ನು ಪ್ರೇರೇಪಿಸುವ ಕೆಲಸ ಮಾಡುತ್ತಿವೆಯಷ್ಟೇ.

ನಮ್ಮ ವಿಶ್ಲೇಷಣೆಯಿಂದ ಸ್ಥೂಲವಾಗಿ ತೀರ್ಮಾನಿಸಬಹುದಾದರೆ, ಬಾಲ್ಯ ಮತ್ತು ಕಲ್ಯಾಣ ರಾಜ್ಯದ ಕಲ್ಪನೆಗಳು ಪರಸ್ಪರ ಒಂದಕ್ಕೊಂದು ಸಂಬಂಧ ಹೊಂದಿವೆ. ಆರ್ಥಿಕ ಜಾಗತೀಕರಣಕ್ಕೆ ರಾಷ್ಟ್ರೀಯ ಎಲ್ಲೆಗಳನ್ನು ಕೈಬಿಡುವ ಅಗತ್ಯವಿದೆ, ಅಂದರೆ ಸ್ವತಂತ್ರ ರಾಷ್ಟ್ರಗಳ ಸರಕಾರಗಳು ದುರ್ಬಲಗೊಳ್ಳಬೇಕು. ಅಂದರೆ [ಜಾಗತಿಕ] ಮಾರುಕಟ್ಟೆಗಳಿಗೆ ಅವು ಕಾರ್ಯನಿರ್ವಹಿಸಲು ಸಾಂಪ್ರದಾಯಿಕವಾಗಿ ಸರಕಾರದ ಅಧಿಪತ್ಯಕ್ಕೆ ಸೇರಿದ ಕ್ಷೇತ್ರಗಳಲ್ಲಿ ಹೆಚ್ಚಿನ ಸ್ಥಳಾವಕಾಶ ಮತ್ತು ಸ್ವಾತಂತ್ರ್ಯ ಬೇಕು. ಅಂದರೆ ಆರೋಗ್ಯ ಮತ್ತು ಶಿಕ್ಷಣದ ಕ್ಷೇತ್ರಗಳಲ್ಲಿ. ಹೆಚ್ಚಿನ ಮುಂದುವರೆಯುತ್ತಿರುವ ದೇಶಗಳಲ್ಲಿ ಆರ್ಥಿಕ ಜಾಗತೀಕರಣವು ಕಲ್ಯಾಣ ಕಾರ್ಯಕ್ರಮಗಳ ಮೇಲಿನ ಸರಕಾರಿ ಸ್ವಾಮ್ಯವನ್ನು ಹಿಂತೆಗಿಸಿದೆ. ಅದು ಮಹಿಳೆಯರು ಮತ್ತು ಮಕ್ಕಳ ಮೇಲೆ ನಕಾರಾತ್ಮಕ ಪರಿಣಾಮವನ್ನು ಬೀರುತ್ತಿದೆ. ಈ ಪ್ರಕ್ರಿಯೆಯು ಮುಂದುವರೆದ ರಾಷ್ಟ್ರಗಳಲ್ಲೂ ನಡೆದಿದೆ, ನಿರ್ದಿಷ್ಟವಾಗಿ ವಲಸೆ ಬಂದ ಸಮುದಾಯಗಳ ಮೇಲೆ ಮತ್ತು ಸಾಮಾನ್ಯವಾಗಿ ದುಡಿಯುವ ವರ್ಗಗಳ ಮೇಲೆ ಪರಿಣಾಮವನ್ನು ಬೀರುತ್ತಿದೆ. ತಂತ್ರಜ್ಞಾನಗಳಿಂದಾದ ತ್ವರಿತ ಬದಲಾವಣೆಗಳಿಂದಾಗಿ ನಿಗೂಢ ವಿಧಾನಗಳಲ್ಲಿ ದುಡಿಯುವ ವರ್ಗ ಮತ್ತು ಸ್ವತಃ ದುಡಿಮೆಯ ಸ್ವರೂಪವೇ ಪಲ್ಲಟಗೊಳ್ಳುತ್ತಿದೆ, ಅದನ್ನು ನಯವಾಗಿ "ಜ್ಞಾನ ಅರ್ಥವ್ಯವಸ್ಥೆ"ಯ (knowledge economy) ಉದಯವೆಂದು ಕರೆಯಲಾಗುತ್ತದೆ. ಬಾಲ್ಯವು ಒಂದು ಸಾಂಸ್ಕೃತಿಕ ಎಲ್ಲೆಯೆನಿಸಿದ್ದು, ಇಲ್ಲಿ ಜಾಗತೀಕರಣದಿಂದ ಆಧುನಿಕತೆಯ ಯೋಜನೆಗೆ ಘಾತವಾಗುತ್ತಿದೆ. ವಿಪರ್ಯಾಸಾತ್ಮಕ ವಿದ್ಯಮಾನದ ಒಂದು ಕ್ರಮಬದ್ಧ ಅಧ್ಯಯನಕ್ಕೆ ದೊಡ್ಡ ಪ್ರಮಾಣದಲ್ಲೇ ಲಕ್ಷಣಗಳು ಮತ್ತು ಅಂಶಗಳು ಸಿಗುತ್ತವೆ. ಅವುಗಳಲ್ಲಿ ಕೆಲವನ್ನು ಈ ಲೇಖನದಲ್ಲಿ ಚರ್ಚಿಸಲಾಗಿದೆ. ಇದೊಂದು ವಿಪರ್ಯಾಸ, ಏಕೆಂದರೆ, ಮೇಲ್ನೋಟಕ್ಕೆ ಜಾಗತೀಕರಣವು ಆಧುನಿಕತೆಯ ಮೂರ್ತರೂಪದ ಸಂಕೇತವೆಂಬಂತೆ ಭಾಸವಾಗುತ್ತದೆ.

ಪರಾಮರ್ಶನಗಳು:

Amnesty International (2004): 'Burundi: Child Soldiers-The Challenge of De-Mobilisation' AFR, Amnesty International, November 16.
– (2003): 'Democratic Republic of Congo: Children at War', AFR, 62/034, Amnesty International.

Aries (1962): 'Centuries of Childhood', Jonathan Cape, London.

Baran, Paul A (1957): 'The Political Economy of Growth', Monthly Review Press, New York.

Brooks, Peter (1969): 'The Child's Part', Beacon Press, Boston.

Custers, P (2006): 'Globalisation and War, Ivory Coast', Economic and Political Weekly, 41: 19, May 13, pp 1848-51.

Dandekar, A et al (2005): 'Causes of Farmer Suicides in Maharashtra: An Enquiry', final report submitted to the high court, Tata Institute of Social Sciences, Rural campus, Tuljapur.

Equations (2004): Towards Strengthening Rights of Minors and Adolescents in Tourism, Equations, Bangalore.

Galeano, E (1998): 'The Open Veins of Latin America', 25th Anniversary edition, Monthly Review Press.

Halperin, R and B Ratteree (2003): 'Where Have All the Teachers Gone? The Silent Crisis', Prospects, 33:2, June, pp 133-38.

Huws, Ursula (2003): 'The Making of a Cybertariat', Monthly Review Press, New York.
– (2006): 'What Will We Do? The Destruction of Occupational Identities in the 'Knowledge based
\ Economy'', Analytical Monthly Review, January 2006, pp 17-30.

Marty, M E and R S Appleby (eds) (1993):Fundamentalisms and Society, University of Chicago Press, Chicago.

Pluss, C (1999): Quick Money-Easy Money? A Report on Child Labour in Tourism, Arbeittskreis Tourismus and Entwicklung, Basel, Switzerland.

UNICEF (1989): State of the World's Children, New York, US.

Wackermann, G (1997): 'Transport, Trade, Tourism and the World Economic System', International Social Science Journal (151), pp 23-39.